

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 85 | Tuesday 17-12-2024 | E-mail : maruti.b.hosamani76@gmail.com | Page: 4 | Price : Rs. 1/-


## “ಮುಗಿಲ ಮಲ್ಲಿಗೆ”ಗೆ ಹಾಡುಗಳಷ್ಟೇ ಬಾಕಿ






**ಸಿಹಿ ಕಹಿ ಸುದ್ದಿ,**
**ಬೆಂಗಳೂರು** : ಇಂಡಿಯನ್ ಜಾಕಿಚಾನ್ ಸಾಹಸ ನಿರ್ದೇಶಕ ಡಾ, ಥ್ರಿಲ್ಲರ್ ಮಂಜು ರವರು ವಿಶೇಷ ಪಾತ್ರದಲ್ಲಿ ನಟಿಸುತ್ತಿರುವ ಬಹು ನಿರೀಕ್ಷಿತ ಸಿನಿಮಾ "ಮುಗಿಲ ಮಲ್ಲಿಗೆ" ಎ.ಎನ್.ಆರ್ ಪಿಕ್ಚರ್ಸ್ ಬ್ಯಾನರ್ ನ ಅಡಿಯಲ್ಲಿ ನಾಗರಾಜ್ ರೆಡ್ಡಿ ನಿರ್ಮಿಸುತ್ತಿರುವ ಕನ್ನಡ ಚಲನ ಚಿತ್ರದ ಮಾತಿನ ಭಾಗದ ಚಿತ್ರೀಕರಣ ಮುಕ್ತಾಯವಾಗಿ ಹಾಡುಗಳಷ್ಟೇ ಬಾಕಿ ಉಳಿದಿವೆ. ಕಮರೊಟ್ಟು ಚೆಕ್ ಪೋಸ್ಟ್ ಖ್ಯಾತಿಯ ಸನತ್ ಹಾಗೂ ಸಹನಾ ಚಂದ್ರಶೇಖರ್ ನಾಯಕ-ನಾಯಕಿಯಾಗಿ ನಟಿಸುತ್ತಿರುವ "ಮುಗಿಲ ಮಲ್ಲಿಗೆ" ಒಂದು ದ್ವೇಷ ಮತ್ತು ಪ್ರೀತಿಯ ಸುತ್ತ ನಡೆಯುವ ಪ್ರೇಮ ಕಥೆ-ಯ ಚಿತ್ರ. ಇಷ್ಟು ದಿನ ಹೊಡಿ, ಬಡಿ ಎನ್ನುತ್ತಾ ಪೊಲೀಸ್ ಪಾತ್ರಗಳಲ್ಲಿ ಮಿಂಚಿದ ನಟ, ನಿರ್ದೇಶಕ, ಸಾಹಸ ನಿರ್ದೇಶಕ ಡಾ, ಥ್ರಿಲ್ಲರ್ ಮಂಜು ರವರು ಮುತ್ತತ್ತಿ ದೇವರಾಜ್ ಹೆಸರಿನ ಎಮೋಷನಲ್ ಪಾತ್ರ ನಿರ್ವಹಿಸುತ್ತಿದ್ದಾರೆ. ಅವರ ಪತ್ನಿಯಾಗಿ ಹಿರಿಯ ನಟಿ ಭವ್ಯಾ ನಟಿಸಿರುವುದು ವಿಶೇಷ. ಕಂಬಳಿಪುರ ಕಾಟೇರಮ್ಮ, ಭಕ್ತರಹಳ್ಳಿ, ಪೂಜೇನ ಅಗ್ರಹಾರ, ಗಟ್ಟಿಗನಬ್ಬೆ. ಹೊಸಕೋಟೆ ಸುತ್ತ ಮುತ್ತಲಿನ ಪರಿಸರದಲ್ಲಿ ಈಗಾಗಲೇ ಮಾತಿನ ಹಾಗೂ ಸಾಹಸ ಸನ್ನಿವೇಶಗಳ ಚಿತ್ರೀಕರಣ ಸತತ ನಡೆಸಿ ಮುಗಿಸಿರುವ "ಮುಗಿಲ ಮಲ್ಲಿಗೆ" ಚಿತ್ರತಂಡ ಹಾಡುಗಳ ಚಿತ್ರೀಕರಣ-ಕ್ಕಾಗಿ ಸಕಲೇಶ್ವರ ಮಡಿಕೇರಿಗೆ ಹೊರಟಿದೆ. ತಾರಾಂಗಣದಲ್ಲಿ ಸನತ್, ಸಹನಾ ಚಂದ್ರಶೇಖರ್, ಥ್ರಿಲ್ಲರ್ ಮಂಜು, ಭವ್ಯಾ, ರಾಜೇಶ್,
ಶಂಕರ್, ಎಂ ವಿ ಸಮಯ್, ಕಿಶೋರ್ ಕುಂಭ್ಳೆ ,ಶಿವು ಕಾಸರಗೋಡು, ಸಿದ್ದಯ್ಯ ಹಿರೇಮಠ, ರವಿ, ಧೀನ, ಬೃಂದ. ನಾಗ, ಜಯರಾಂ, ಯುವೀನ, ಸತ್ಯವಾರ ನಾಗೇಶ್, ವಸಂತ ನಾಯಕ್, ಕಿರಣ್ ಗಟ್ಟಿಗನಬ್ಬೆ, ಮೋನಿಕಾ, ಮೊದಲಾದವರು ನಟಿಸುತ್ತಿದ್ದಾರೆ, ತಾಂತ್ರಿಕ ವರ್ಗದಲ್ಲಿ ಅಭಿನಂದನ್ ಶೆಟ್ಟಿ ಛಾಯಾಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ. ರಾಜೀವ್ ಕೃಷ್ಣ ಸಾಹಿತ್ಯ, ವಿನಯ್ ಜಿ ಆಲೂರು ಸಂಕಲನ,
ಥ್ರಿಲ್ಲರ್ ಮಂಜು ಸಾಹಸ, ಇಂದ್ರ ಸ್ಥಿರ ಚಿತ್ರಣ, ಮೋಹನ್ ಕುಮಾರ್ ಪ್ರಸಾಧನ, ಮಲ್ಲಿಕಾರ್ಜುನ ರವರ ಕಲಾ ನಿರ್ದೇಶನ, ಭದ್ರಾವತಿ ಪ್ರವೀಣ್ ಸಹನಿರ್ದೇಶನ, ಎಂ.ಜಿ ಕಲ್ಲೇಶ್, ಡಾ, ಪ್ರಭು. ಗಂಜಿಹಾಳ, ಡಾ, ವೀರೇಶ್ ಹಂಡಗಿ ಅವರ ಪತ್ರಿಕಾ ಸಂಪರ್ಕವಿದೆ. ಈಗಾಗಲೇ ಟಾಲಿವುಡ್ ನಲ್ಲಿ ರುದ್ರಾಕ್ಷಪುರಂ, ಪ್ರೇಮಭಿಕ್ಷ ಚಿತ್ರಗಳನ್ನು ನಿರ್ದೇಸಿರುವ ಆರ್.ಕೆ. ಗಾಂಧಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

**-ಡಾ. ಪ್ರಭು ಗಂಜಿಹಾಳ**
**ಮೊ-9448775346**

## ಪರಿಶಿಷ್ಟ ಜಾತಿಗಳ ಒಳ ಮೀಸಲಾಯಿತಿ ಜಾರಿಗೊಳಿಸುವಂತೆ ಆಗ್ರಹಿಸಿ ಡಿ.ಎಸ್.ಎಸ್ ಸಂಘಟನೆಯಿಂದ: ಮುಖ್ಯಮಂತ್ರಿಗೆ ಮನವಿ

**ಸಿಹಿ ಕಹಿ ಸುದ್ದಿ,**
**ಗದಗ** : ಗದಗ ಜಿಲ್ಲೆಯ ರೋಣ ತಾಲೂಕಿನ ರೋಣ ಪಟ್ಟಣದಲ್ಲಿ ಡಿ, 15 ರಂದು 200 ಕೋಟಿ ವೆಚ್ಚದ ಶಂಕು ಸ್ಥಾಪನೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಿ.ಎಂ ಸಿದ್ದರಾಮಯ್ಯ ನವರಿಗೆ ಗದಗ ಜಿಲ್ಲೆಯ ಪ್ರೊ, ಬಿ,ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಸಿ.ಎಂ ಸಿದ್ದರಾಮಯ್ಯ ನವರಿಗೆ ಯಥಾವತ್ತಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾಯಿತಿ ಜಾರಿ ಗೋಳಿಸಬೇಕೆಂದು ಮನವಿ ಕೊಡುವುದರ ಮೂಲಕ ಪಟ್ಟು ಹಿಡಿದ ಗದಗ ಹಾಗೂ ರೋಣ ದಲಿತ ಮುಖಂಡರು ಒತ್ತಾಯಿಸಿದರು.
ಆಗಸ್ಟ್. 1/2024 ರಂದು ಪರಿಶಿಷ್ಟ ಜಾತಿ ಪಂಗಡಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ಆಯಾಯ ರಾಜ್ಯಗಳಿಗೆ ಅಧಿಕಾರ ಇದೆ-ಯೆಂದು ಏಳು ನ್ಯಾಯ ಮೂರ್ತಿಗಳ ಸಾಂವಿಧಾನಿಕ ಪೀಠದಿಂದ ಐತಿಹಾಸಿಕ ತೀರ್ಪು ಹೊರ ಬಂದಿರುವುದು ತುಳಿತಕ್ಕೊಳಗಾದ ಶೋಷಿತ ವರ್ಗಗಳಿಗೆ ಶಿಕ್ಷಣ, ಉದ್ಯೋಗ ಹಾಗೂ ಇತ-ರೆ ಸೌಲಭ್ಯಗಳನ್ನು ಪಡೆಯಲು ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಒಳ ಮೀಸಲಾತಿಗಾಗಿ 30 ವರ್ಷಗಳಿಂದ ಹೋರಾಟ ನಡೆಯುತ್ತಿದ್ದು, ಈ ಹೋರಾಟದಲ್ಲಿ ಹಲವಾರು ತಮ್ಮ ಬದುಕನ್ನು ತ್ಯಾಗ ಮಾಡಿದ್ದಾರೆ , ಮತ್ತೆ ಕೆಲವರು ಪ್ರಾಣ ತ್ಯಾಗ ಮಾಡಿರುತ್ತಾರೆ ಎಂಬುದು ತಮಗೆ ತಿಳಿದಿರುವಂತ ಸಂಗತಿ.




ಸುಪ್ರೀಂ ಕೋರ್ಟ್ ನ್ಯಾಯ ಮೂರ್ತಿಗಳಾದ ಡಿ.ವೈ ಚಂದ್ರಚೂಡ್ ಮತ್ತು ಉಳಿದ 6 ಜನ ನ್ಯಾಯ ಮೂರ್ತಿಗಳಾದ ಬಿ.ಆರ್ ಗವಾಯಿ, ವಿಕ್ರಮ್ ನಾಥ್,
ಬೇಲಾ.ಎಂ ತ್ರಿವೇದಿ, ಪಂಕಜ್.ಮಿಥಾಲ್, ಮನೋಜ್. ಮಿಶ್ರಾ ಮತ್ತು ಸತೀಶ್. ಚಂದ್ರಶರ್ಮ ಒಳ ಗೊಂಡಂತೆ 6:1 ರ ಅನುಪಾತದಲ್ಲಿ ಪರಿಶಿಷ್ಟ ಜಾತಿಗಳಿಗೆ ಉಪ ವರ್ಗೀಕರಣ ಮಾಡಬಹುದೆಂದು ಆಯಾಯ ರಾಜ್ಯಗಳಿಗೆ ತೀರ್ಪನ್ನು ನೀಡಿರುತ್ತಾರೆ.
ಪರಿಶಿಷ್ಟರ ನೂರೊಂದು ಜಾತಿಗಳಲ್ಲಿ ಮಾದಿಗ-ಮಾದಿಗ ಸಹ ಸಂಬಂಧಿತ ಜಾತಿಗಳಿಗೆ ಶೇ.6 ರಷ್ಟು, ಹೊಲೆಯ ಸಹ ಸಂಬಂಧಿತ ಜಾತಿಗಳಿಗೆ ಶೇ.5 ರಷ್ಟು, ಸ್ಪೃಶ್ಯ ಜಾತಿಗಳಾದ ಕೊರಮ, ಕೊರಚ, ಬೋವಿ, ಲಂಬಾಣಿಗಳಿಗೆ ಶೇ.3 ರಷ್ಟು, ಅಲೆಮಾರಿ ಅಸ್ಪೃಶ್ಯ ಜಾತಿಗಳಿಗೆ ಶೇ.1 ರಷ್ಟನ್ನು ಜನಸಂಖ್ಯಾ ಆಧಾರಿತವಾಗಿ ಒಳ ಮೀಸಲಾತಿ ಕಲ್ಪಿಸಿರುವುದು ತಮಗೆಲ್ಲರಿಗೂ ತಿಳಿದಿರುವ ವಿಷಯ.
ಸುಪ್ರೀಂ ಕೋರ್ಟ್ ಆಗಸ್ಟ್. 1/2024 ರಂದು ನೀಡಿದ ಆದೇಶದನ್ವಯ ಕರ್ನಾಟಕ ಸರ್ಕಾರವು ದಿನಾಂಕ: 28.10.2024 ರಂದು ಸಚಿವ ಸಂಪುಟ ಸಭೆಯಲ್ಲಿ ಎಂಪೇರಿಕಲ್ ಡಾಟಾ ಸಂಗ್ರಹ ಮಾಡಲು ಏಕ ಸದಸ್ಯ ಆಯೋಗವನ್ನು ರಚಿಸಿ ನಿವೃತ್ತ ನ್ಯಾ. ಹೆಚ್.ಎನ್ ನಾಗಮೋಹನ್ ದಾಸ್ ಅವರನ್ನು ಆಯೋಗಕ್ಕೆ ನೇಮಿಸಿತು.
ಮುಂದುವರೆದು ಹೊರಡಿಸಿದ್ದು ಈ ಕಾರ್ಯಸೂಚಿಗೆ ತಕ್ಕಂತೆ ನಾವು ನಮ್ಮ ಸಮಾಜವನ್ನು ಸಿದ್ಧ ಗೊಳಿಸಿ ಆಯೋಗ-ಕ್ಕೆ ತಕ್ಕ ಸಮಂಜಸ ಮಾಹಿತಿ ಒದಗಿಸಲು ತುರ್ತಾಗಿ ಸಜ್ಜಾಗ ಬೇಕಾಗಿದೆ.
ಈ ಮಹತ್ತರ ಉದ್ದೇಶದ ಹಿನ್ನೆಲೆಯಿಂದ ಮಾದಿಗ ಸಮಾಜವನ್ನು ಜಾಗೃತಿ ಗೊಳಿಸಿ, ಒಳ ಮೀಸಲಾತಿಯನ್ನು ಸರ್ಕಾರ ಅತೀ ಶೀಘ್ರವಾಗಿ ಜಾರಿ ಗೊಳಿಸಲು ಸನ್ನದ್ಧ ಗೊಳಿಸುವ ಸಲುವಾಗಿ ಗದಗ ಜಿಲ್ಲೆಯ ತುತ್ತ ತುದಿಯವರೆಗೂ ಒಳ ಮೀಸಲಾತಿಯನ್ನು ಪಡೆಯುವ ಸಲುವಾಗಿ ಇದೇ ಡಿಸೆಂಬರ್ 14,2024 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಮಾದಿಗ ವಕೀಲರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಹಂತ ಮಹತ್ವದ ಸಮಾವೇಶಕ್ಕೆ ತಮ್ಮಗಳ ಭಾಗವಹಿಸುವಿಕೆಯು ಪ್ರಮುಖ ಜವಾಬ್ದಾರಿ ಹಾಗೂ ಕರ್ತವ್ಯವೆಂದು ಭಾವಿಸಿ ಒಳ ಮಿಸಲಾತಿ ಜಾರಿ ಮಾಡಬೇಕೆಂದು ಪ್ರೊ, ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮೀತಿ ಗದಗ ಜಿಲ್ಲಾ ಸಮಿತಿ ವತಿಯಿಂದ ಮನವಿ ಕೊಡಲಾಯಿತು.
ಇದೆ ಸಂದರ್ಭದಲ್ಲಿ ಎಸ್.ಎನ್ ಬಳ್ಳಾರಿ (ರಾಜ್ಯ ಸಂಘಟನಾ ಸಂಚಾಲಕರು) ಪ್ರಕಾಶ.ಎಮ್ ಹೊಸಳ್ಳಿ ( ರಾಜ್ಯ ವಿಭಾಗೀಯ ಸಂಚಾಲಕರು) ದುರಗಪ್ಪ. ಎಲ್ ಹರಿಜನ (ಗದಗ ಜಿಲ್ಲಾ ಸಂಚಾಲಕ) ಸಂಗಪ್ಪ. ಹೊಸಮನಿ.ಮರಿಯಪ್ಪ ಎನ್ ಮಾದರ.ಹನಮಂತ ಪೂಜಾರ. ಸುರೇಶ ನಡುವಿನಮನಿ. ಸೋಮಶೇಖರ.ಎಸ್ ನಾಗರಾಜ. ಶರಣಪ್ಪ ದೊಡ್ಡಮನಿ. ಮಲ್ಲು ಮಾದರ. ಯಲ್ಲಪ್ಪ ಮಾದರ. ಭೀಮಪ್ಪ ಮಾದರ. ಪರಶು ಮಾದರ. ಮುತ್ತಪ್ಪ ಜೋಗನ್ನವರ. ಅಂದಪ್ಪ ಮಾದರ. ಶರಣು ದೊಡ್ಡಮನಿ. ಚಂದ್ರು ಹಂಚಿನಾಳ. ಯಲ್ಲಪ್ಪ ಪೂಜಾರ. ರಮೇಶ ನಂದಿ. ಅಭಿಷೇಕ ಕೊಪ್ಪದ. ಮತ್ತು ಇನ್ನೂ ಅನೇಕ ಮುಖಂಡರು ಯುವಕರು ಪಾಲ್ಗೊಂಡಿದ್ದರು.

## ಗೃಹರಕ್ಷಕ ದಳದಿಂದ ಸಮಾಜಕ್ಕೆ ಉತ್ತಮ ಸೇವೆ

**ಇಂಡಿ** : ಗೃಹರಕ್ಷಕ ದಳದ ಸೇವೆ ಅಮೂಲ್ಯವಾದ ಸೇವೆಯಾಗಿದೆ.ಪೊಲೀಸರಿಗೆ ಬೆನ್ನೆಲುಬಾಗಿ ಸೇವೆ ಸಲ್ಲಿಸುವಲ್ಲಿ ಗ್ರಹರಕ್ಷಕದಳ ಯಶಸ್ವಿಯಾಗಿದೆ ಎಂದು ಇಂಡಿ ಡಿವೈಎಸ್ಪಿ ಎಚ್. ಜಗದೀಶ ಹೇಳಿದರು.



ಅವರು ಪಟ್ಟಣದ ಡಿವೈಎಸ್ಪಿ ಕಾರ್ಯಾಲಯದ ಸಭಾ ಭವನದಲ್ಲಿ ಜಿಲ್ಲಾ ಗ್ರಹರಕ್ಷಕ ದಳ ಹಮ್ಮಿಕೊಂಡ ಅಖಿಲ ಭಾರತ ಗ್ರಹರಕ್ಷಕ ದಳ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.
ಜೀವ ರಕ್ಷಣೆ,ಆಸ್ತಿ ರಕ್ಷಣೆ ಹಾಗೂ ಕಾನೂನು ಸುವ್ಯವಸ್ಥೆ ಪಾಲಿಸಲು ಗ್ರಹರಕ್ಷಕದಳದ ಕೊಡುಗೆ ಮಹತ್ತರವಾದದ್ದು ಎಂದು ಹೇಳಿದ ಅವರು, ಜಿಲ್ಲೆಯಲ್ಲಿ ಎಲ್ಲ ಘಟಕದ ಗ್ರಹರಕ್ಷಕರು ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.
ಗ್ರಹರಕ್ಷಕದಳ ಪೊಲೀಸ್ ಇಲಾಖೆಗೆ ಪೂರಕ ಪಡೆಯಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.ಸಂಚಾರಿ ನಿಯಂತ್ರಣ,ಪ್ರವಾಹ,ಬೆಂಕಿ ಅನಾಹುತ ಇನ್ನಿತರ ಸಂದರ್ಭದಲ್ಲಿ ಜನರಿಗೆ ಸೂಕ್ತ ರಕ್ಷಣೆ ಒದಗಿಸುತ್ತಿದ್ದಾರೆ ಎಂದು ಹೇಳಿದರು.
1946 ರಲ್ಲಿ ಸ್ಥಾಪನೆಗೊಂಡ ಗ್ರಹರಕ್ಷಕ ದಳ ಇಂದಿನವರೆಗೂ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿದೆ.ಅವರ ನಿಷ್ಕಾಮ ಸೇವೆ ನಿಜಕ್ಕೂ ಪ್ರಶಂಸನೀಯ.ಸಮಾಜದಲ್ಲಿ ಸದಾ ಉತ್ಸಾಹ ಮತ್ತು ಹುಮ್ಮನಿಸಿನಿಂದ ಸಮಾಜ ಸೇವೆ ಮಾಡುವ ಗ್ರಹರಕ್ಷಕ ದಳ ಸೇವೆ ಮತ್ತು ಪೊಲೀಸ್ ಇಲಾಖೆಗೆ ನೀಡುವ ಸಹಕಾರ ಮುಂದುವರೆಯಲಿ ಎಂದು ಹೇಳಿದರು.
ಗ್ರಹರಕ್ಷಕ ದಳವು ಪೊಲೀಸ್ ಇಲಾಖೆಯ ಒಂದು ಪ್ರಮುಖ ಅಂಗವಾಗಿದ್ದು,ತುರ್ತು ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಿ ಸಮಾಜಕ್ಕೆ ಉತ್ತಮ ರೀತಿಯ ಸೇವೆ ಸಲ್ಲಿಸಲು ಸಹಕಾರ ನೀಡುತ್ತಿದೆ.ಪೊಲೀಸ್‌ರು ಎಲ್ಲಾ ಸಂದರ್ಭದಲ್ಲಿ ಎಲ್ಲಾ ಕಡೆಗಳಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಪೊಲೀಸ್‌ರೊಂದಿಗೆ ಕೈಜೊಡಿಸಿಕೊಂಡು ಬಂದಿರುವ ಇಲಾಖೆ ಗ್ರಹರಕ್ಷಕ ದಳ. ಯಾವುದೇ ಸಮಯದಲ್ಲಿಯೂ ಪೊಲೀಸ್ ಇಲಾಖೆಯ ಕೆಲಸಗಳಿಗೆ ಗ್ರಹರಕ್ಷಕರು ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಗ್ರಹರಕ್ಷಕ ದಳ ಜಿಜಯಪುರ ಜಿಲ್ಲಾ ಸನಾದೇಷ್ಟರಾದ ಶಿವಾನಂದ ಶಿವೂರ ಮಾತನಾಡಿ, ಗ್ರಹರಕ್ಷಕರು ಖಾಕಿ ಸಮವಸ್ತ್ರ ಧರಿಸಿದಾಗ
ಭಿನ್ನವಾಗಿ ಕಾಣಿಸುತ್ತಾರೆ.ಸಮವಸ್ತ್ರದಲ್ಲಿರುವಾಗ ಶಿಸ್ತಿನಿಂದ ವರ್ತಿಸುವುದು,ಶ್ರೆದ್ದೆ ಮತ್ತು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವುದು, ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವುದು ಮುಖ್ಯ ಎಂದು ಹೇಳಿದರು. ಗ್ರಹರಕ್ಷಕರು ಸಮಾಜಸೇವೆ ಮಾಡುವುದರೊಂದಿಗೆ ಸಾರ್ವಜನಿಕರ ಜೀವರಕ್ಷಣೆಯ ತರಬೇತಿ ಪಡೆದಿರುತ್ತಾರೆ.ವೈದ್ಯರು ಚಿಕಿತ್ಸೆ ನೀಡುವ ಮೊದಲು ,ಪ್ರಥಮ ಚಿಕಿತ್ಸೆ ನೀಡುವ ಗ್ರಹರಕ್ಷಕರು ಜೀವಗಳನ್ನು ಉಳಿಸುವ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಗ್ರಹರಕ್ಷದರ ಸೇವೆಯನ್ನು ಶ್ಲಾಘೀಸಿದರು.
ಉಪ ಸಮಾದೇಷ್ಟರಾದ ಬಿ.ಎಸ್.ಕಾಂಬಳೆ ಸ್ವಾಗತಿಸಿ,ಪ್ರಾಸ್ತಾವಿಕವಾಗಿ ಮಾತನಾಡಿದರು.ಜಿಲ್ಲಾ ಗ್ರಹರಕ್ಷಕ ದಳ ಬೋಧಕ ಮಹಾದೇವ ಪೂಜಾರ ಮಾತನಾಡಿದರು. ಇಂಡಿ ಘಟಕದ ಘಟಕಾಧಿಕಾರಿ ಎನ್.ಎನ್.ಗವಳಿ ಪ್ರತಿಜ್ಞಾವಿಧಿ ಬೋಧಿಸಿದರು.ಪ್ರ.ದ ಸಹಾಯಕ ಆರೀಪ ಮುಲ್ಲಾ, ರಾಘವೇಂದ್ರ ಕುಲಕರ್ಣಿ, ಸುನಂದಾ ರೊಟ್ಟಿ,
ಬಿ.ಎಸ್.ಹಡಪದ, ಎಸ್.ಪಿ.ಸುಲಾಖೆ ಸೇರಿದಂತೆ ಜಿಲ್ಲೆಯ ಎಲ್ಲಾ ಘಟಕದ ಘಟಕಾಧಿಕಾರಿಗಳು, ಗ್ರಹರಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



**ಹಳ್ಳೂರ : ಪವಮಾನ ಹೋಮ ಹಾಗೂ 5 ದಿನದ ಮಾಲಾದಾರಣೆ ಕಾರ್ಯಕ್ರಮವು ಅತೀ ವಿಜೃಂಭಣೆಯಿಂದ ಸೋಮವಾರದಂದು ನೂರಾರು ಶ್ರೀ ರಾಮನ ಮಾಲಾಧಾರಿಗಳಿಂದ ಜರುಗಿತು. ಬೆಳಿಗ್ಗೆ ಪ್ರಾರಂಭದಲ್ಲಿ ಹಳ್ಳದ ರಂಗನ ದೇವಸ್ಥಾನದಲ್ಲಿ ಪವಮಾನ ಹೋಮ ನಡೆದು ನಂತರ ಮಾಲಾದಾರಣೆ ನಡೆದು,ಊರಿನ ಪ್ರಮುಖ ಬೀದಿಗಳಲ್ಲಿ ಶ್ರೀ ರಾಮನ ಭಾವ ಚಿತ್ರ ಹಾಗೂ ಪಲ್ಲಕ್ಕಿ ಉತ್ಸವದೊಂದಿಗೆ ಸಂಕೀರ್ಣ ಯಾತ್ರೆ ನಡೆಯಿತು. ನಂತರ ಜೈ ಹನುಮಾನ್ ದೇವಸ್ಥಾನದಲ್ಲಿ ಸತ್ಸಂಗ ಕಾರ್ಯಕ್ರಮ ನಡೆಯಿತು. ಸರ್ವರಿಗೂ ಮಹಾಪ್ರಸಾದ ವ್ಯವಸ್ಥೆ ನಡೆಯಿತು.ಈ ಸಮಯದಲ್ಲಿ ವಿಶ್ವ ಹಿಂದೂ ಪರಿಷತ್ ಬಜರಂಗ ದಳದವರಿದ್ದರು.**

## ಕೈಮಗ್ಗ ನೇಕಾರಿಕೆಗೆ ಉತ್ತೇಜನ ನೀಡಿ

**ಗುಳೇದಗುಡ್ಡ** : ಪಟ್ಟಣದ ಹೊಂಬೆಳಕು ಹ್ಯಾಂಡ್‌ಲೂಮ್ಸ್ ಕೈ ಮಗ್ಗ ಘಟಕಕ್ಕೆ ಮುಂಡರಗಿ, ಬೈಲೂರು ನಿಷ್ಕಲ ಮಂಟಪದ ಶ್ರೀಜಗದ್ಗುರು ತೋಂಟದಾರ್ಯ ಮಠದ ಶ್ರೀನಿಜಗುಣಪ್ರಭು ತೋಂಟದಾರ್ಯಮಹಾಸ್ವಾಮಿಗಳು ಭೇಟಿ ನೀಡಿ ಕೈಮಗ್ಗ ಖಣದ ನೇಕಾ-ರಿಕೆ ವೀಕ್ಷಿಸಿದರು.



ಪಟ್ಟಣದಲ್ಲಿ ಬಹಳಷ್ಟು ವಿನೂತನ ಮಾದರಿಯಲ್ಲಿ ಕೈಮಗ್ಗ ಘಟಕ ಸ್ಥಾಪಿಸಿ ಗಮನ ಸೆಳೆದಿರುವ ರವೀಂದ್ರ ಜಿಡಗಿ ಅವರ ಈ ವಿಶಿಷ್ಠ ರೀತಿಯ ಆಕರ್ಷಖ ಕೈಮಗ್ಗ ನೇಕಾರಿಕೆ ಘಟಕದಲ್ಲಿ ಕೈಮಗ್ಗದ ಉತ್ಪನ್ನಗಳನ್ನು ವೀಕ್ಷಣೆ ಮಾಡಿ ಸಂತಸ ವ್ಯಕ್ತಪಡಿಸಿದರು.ಈಸಂದರ್ಭದಲ್ಲಿಶ್ರೀನಿಜಗುಣಪ್ರಭು ತೋಂಟದಾರ್ಯ ಮಹಾಸ್ವಾಮಿಗಳು ಮಾತನಾಡಿ, ಅವಸಾನದ ಅಂಚಿನಲ್ಲಿ ಇರುವ ಕೈಮಗ್ಗಕ್ಕೆ ಪುನಶ್ಚೇತನನೀಡುವ ಉದ್ದೇಶದಿಂದ ಹೊಂಬೆಳಕು ಹ್ಯಾಂಡ್‌ಲೂಮ್ಸ್ ಘಟಕ ಸ್ಥಾಪಿಸಿದ್ದು ಆ ಮೂಲಕ ಕೈಮಗ್ಗ ನೇಕಾರಿಕೆ ಉದ್ಯಮ ಜೀವಂತವಾಗಿರಿಸುವ ಕೆಲಸ ಮಾಡುತ್ತಿರುವ ರವೀಂದ್ರ ಜಿಡಗಿ ಅವರ ಕುಟುಂಬದ ಕಾರ್ಯ ಶ್ಲಾಘನೀಯ. ಕೈಮಗ್ಗ ನೇಕಾ-ರಿಕೆಗೆ ಪ್ರತಿಯೊಬ್ಬರೂ ಉತ್ತೇಜನ ನೀಡಬೇಕು. ನಮ್ಮ ಪುರಾತನ ಕಾಲದ ನಮ್ಮ ಮನೆ ಕಸುಬು ಮನೆ ಮಕ್ಕಳಿಗೆ ಕಲಿಸಬೇಕು. ಇಂದಿನ ಯುವಕರು ಕೈಮಗ್ಗ ನೇಕಾರಿಕೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ಕೈಮಗ್ಗ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುವಂತೆ ಮಾಡಬೇಕು ಎಂದರು.
ಶ್ರೀನಿಜಗುಣಪ್ರಭು ತೋಂಟದಾರ್ಯ ಮಹಾಸ್ವಾಮಿಗಳ ಭೇಟಿ ಸಂದರ್ಭದಲ್ಲಿ ನೇಕಾರರಾದ ಗೌರವ್ವ ಬಸಪ್ಪ ಜಿಡಗಿ, ಶೇಖರಪ್ಪ ಖಂಡಿ, ಸಂಕಣ್ಣ ಜವಳಿ, ರವೀಂದ್ರ ಜಿಡಗಿ, ಶ್ರೀಮತಿ ಶಕುಂತಲಾ ಭಾವಿ, ಪ್ರಕಾಶ ರೋಜಿ ಇತರರು ಇದ್ದರು.

## ಏಡ್ಸ ನಿಯಂತ್ರಣಕ್ಕೆ ಕೈ ಜೋಡಿಸಿ

**ಇಂಡಿ** : ಅಸುರಕ್ಷಿತ ಲೈಂಗಿಕತೆ ಜೀವಕ್ಕೆ ಅಪಾಯ. ಅದರಲ್ಲೂ ಮಹಾಮಾರಿ ಎಚ್.ಐ ವಿ ಮತ್ತು ಏಡ್ಸ ಸೋಂಕಿತದ ಬಗ್ಗೆ ಯುವ ಜನಾಂಗ ಬಹಳಷ್ಟು ಎಚ್ಚರಿಕೆ ಮತ್ತು ಸುರಕ್ಷಾ ಕ್ರಮ ಅನುಸರಿಸಲು ಹಿರಿಯ ಶ್ರೇಣಿ ನ್ಯಾಯಾಧೀಶ ಕೊಟೆಪ್ಪ ಕಾಂಬಳೆ ಮಾತನಾಡಿದರು.
ತಾಲೂಕಿನ ಚವಡಿಹಾಳ ಗ್ರಾಮದ ಭಾಗ್ಯವಂತಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಏಡ್ಸ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.ಕಿರಿಯ ಶ್ರೇಣಿ ನ್ಯಾಯಾಧೀಶ ಸುನೀಲಕುಮಾರ ಮಾತನಾಡಿ ಏಡ್ಸ ಎಂದು ಯಾರು ಭಯ ಪಡುವ ಅಗತ್ಯವಿಲ್ಲ. ಅದಕ್ಕಾಗಿ ಸರಕಾರ ಅನೇಕ ಕಾರ್ಯಕ್ರಮ ಹಮ್ಮಿಕೊಂಡು ಏಡ್ಸ ಹೋಗಲಾಡಿಸಲು ಪ್ರಯತ್ನ ನಡೆದಿದೆ ಎಂದರು.
ಡಾ॥ ರಾಜೇಶ ಕೋಳೆಕರ ಮಾತನಾಡಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆಸ್ಪತ್ರೆಯಲ್ಲಿ ಉಚಿತ ಊಟ, ಔಷದ ರಕ್ತ ಪರೀಕ್ಷೆ ವೈದ್ಯರ ಸಲಹೆ ನೀಡಲಾಗುತ್ತದೆ ಎಂದರು.
ಪ್ರಾಚಾರ್ಯ ಚಂದ್ರಶೇಖರ ದಶವಂತ, ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಎಸ್. ಅಂಬಲಗಿ, ಕೆ.ಜಿ.ಶೀಲವಂತ, ವಿಜಯಕುಮಾರ ಶಿಂಧೆ ಮಾತನಾಡಿದರು.
ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಶಾಂತಪ್ಪ ದಶವಂತ, ನ್ಯಾಯವಾದಿ ಅಶೋಕ ಗಜಾಕೋಶ, ಅಜೀತ ಧನಶೆಟ್ಟಿ, ವೈದ್ಯರಾದ ಡಾ॥ ಪ್ರವೀಣ ಗಜಾಕೋಶ, ಎನ್. ಕೆ.ನಾಡಪುರೋಹಿತ, ಹರೀಶ ಪತ್ತಾರ,ವೀರೇಶ ಹಿರೇಮಠ ,ವಿನೋದ ಚಿಕ್ಕಮಠ, ಸರಕಾರಿ ಅಭಿಯೋಜಕ ಆಯ್. ಕೆ.ಗಚ್ಚಿನಮಹಲ, ಮಲ್ಲೇಶ ಎಂಬತನಾಳ ಮತ್ತಿತರಿದ್ದರು.

## ಜ.18,19ರಂದು ಬೆಂಗಳೂರಿನಲ್ಲಿ ಆಯೋಜನೆ | ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಆಹ್ವಾನ
## ಸುವರ್ಣ ಮಹೋತ್ಸವ : ಸಮ್ಮೇಳನ ಯಶಸ್ವಿಗೆ-ಎಕೆಬಿಎಂಎಸ್ ಅಧ್ಯಕ್ಷ ಅಶೋಕ ಹಾರನಹಳ್ಳಿ ಕರೆ

**ಬಾಗಲಕೋಟೆ** : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸುವರ್ಣ ಮಹೋತ್ಸವದ ಪ್ರಯುಕ್ತ ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ವಿಪ್ರರ "ವಿಶ್ವಾಮಿತ್ರ" ಸಮ್ಮೇಳನದಲ್ಲಿತ್ರಿಮತಸ್ಥ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾಜದ ಒಗ್ಗಟ್ಟು ಪ್ರದರ್ಶಿಸಬೇಕೆಂದು ಮಹಾಸಭೆ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಕರೆ ನೀಡಿದರು.
ವಿದ್ಯಾಗಿರಿಯ ವಿಪ್ರ ಅಭಿವೃದ್ಧಿ ಸಂಘದ ರಾಯರಮಠ ಆವರಣದಲ್ಲಿರುವ ಮಹಾಸಭೆಯ ಜಿಲ್ಲಾ ಕಚೇರಿಯಲ್ಲಿ ನಡೆದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.
ಜ.18 ಮತ್ತು ಜ.19ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ತ್ರಿಮತಸ್ಥ ಯತಿಗಳು ಸಾನಿಧ್ಯವಹಿಸಿ ಆಶೀರ್ವಚನ ನೀಡಲಿದ್ದಾರೆ. ಸಮಾಜದ ಒಗ್ಗಟ್ಟು ಪ್ರದರ್ಶಿಸಲು ದೊಡ್ಡ ಸಂಖ್ಯೆಯಲ್ಲಿ ಜನ ಪಾಲ್ಗೊಳ್ಳುವಂತೆ ಕೋರಿದರು.
ಸಮ್ಮೇಳನಕ್ಕೆ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಪ್ರಹ್ಲಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ರಾಜಸ್ಥಾನ ಮುಖ್ಯಮಂತ್ರಿ ಭಜನಲಾಲ್ ಶರ್ಮಾ,




ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಸಚಿವ ದಿನೇಶ ಗುಂಡೂರಾವ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿ ಗಣ್ಯರನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಮ್ಮೇಳನ ಪ್ರಯುಕ್ತ 24 ಕೋಟಿ ಗಾಯತ್ರಿ ಜಪ ಪಠಣೆಗೆ ಕರೆ ನೀಡಲಾಗಿದೆ. ಸಮ್ಮೇಳನದ ದಿನದಂದು 1 ಲಕ್ಷ ಗಾಯತ್ರಿ ಜಪಯಜ್ಞ ಕೈಗೊಳ್ಳಲಾಗುತ್ತಿದೆ . ಲಕ್ಷಾಂತರ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಜನರಿಗೆ ಊಟೋಪಚಾರಕ್ಕಾಗಿ ಕುಂದಾಪುರದ 50 ಬಾಣಸಿಗರ ತಂಡ ಕೆಲಸ ಮಾಡಲಿದೆ ಎಂದರು.
125 ಮಳಿಗೆಗಳನ್ನು ವ್ಯಾಪಾರ ವಹಿಟವಾಟಿಗಾಗಿ ಸ್ಥಾಪಿಸಲಾಗುತ್ತಿದೆ, ಮಹಿಳಾ ಘಟಕದ ಸಾರಥ್ಯದಲ್ಲಿ ಭಗವದ್ಗೀತೆ ಸ್ಪರ್ಧೆ ಸಂಘಟಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.
ತ್ರಿಮತಸ್ಥರನ್ನು ಒಟ್ಟುಗೂಡಿಸಲು ಗಾಯತ್ರಿ ಜಪವು ದಿವ್ಯಮಂತ್ರವಾಗಿದೆ. ಈ ಬಾರಿ ಸಮಾಜದ ಒಗ್ಗಟ್ಟು ಪ್ರದರ್ಶಿಸಿ ಬ್ರಾಹ್ಮಣ ಸಮಾಜದ ಶಕ್ತಿ ಪ್ರದರ್ಶಿಸಬೇಕಿದೆ. ಸಮ್ಮೇಳನಕ್ಕೆ ಆಗಮಿಸುವ ಜನಕ್ಕೆ ಸಕಲ ರೀತಿಯಿಂದಲೂ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಬಾಗಲಕೋಟೆ ಜಿಲ್ಲೆಯಿಂದ ವಿಪ್ರರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಆಹ್ವಾನಿಸಿದರು.
ಪಂ.ಬಿಂದುಮಾಧವಾಚಾರ್ಯ ನಾಗಸಂಪಿಗೆ ಅವರು ಮಾತನಾಡಿ, ವಿಪ್ರರು ಎಂದರೆ ವಿಶೇಷ ಪ್ರಗತಿಯ ಸಂಕೇತ. ನಾವು ವಿಶ್ವಕ್ಕೆ ಮಿತ್ರರಾದವರು. ಸಮ್ಮೇಳನದಲ್ಲಿ ಬಾಗಲಕೋಟೆ ಜಿಲ್ಲೆಯಿಂದ ದೊಡ್ಡ ಸಂಖ್ಯೆಯಲ್ಲಿ ಜನ ತೆರಳಿ ಭಾಗಿಯಾಗೋಣ ಎಂದರು.
ಸಭೆಯಲ್ಲಿ ಉದ್ಯಮಿ ಸಿ.ಎನ್.ದಾಸ್ ಅವರ ಅಗಲಿಕೆಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.
ಮಹಾಸಭೆ ರಾಜ್ಯ ಪದಾಧಿಕಾರಿಗಳಾದ ಕಾರ್ತಿಕ ಬಾಪಟ್, ವಿಜಯೇಂದ್ರ ನಾಡಜೋಶಿ,ಸುಧಾಕರಬಾಬು,ಡಾ.ಗಿರೀಶ ಮಸೂರಕರ, ಟಿ.ಎಚ್.ಕುಲಕರ್ಣಿ, ಜಿಲ್ಲಾ ಕಾರ್ಯದರ್ಶಿ ಎಸ್.ಕೆ.ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷಸಂತೋಷಗದ್ದನಕೇರಿ,ಮಹಿಳಾ ಘಟಕದ ಅಧ್ಯಕ್ಷೆ ಶುಭದಾ ದೇಶಪಾಂಡೆ, ಅಂಬಿಕಾ ಜೋಶಿ, ವಿನಾಯಕ ತಾಳಿಕೋಟಿ, ಪ್ರದೀಪ್ ಪರ್ವತಿಕರ, ಡಾ.ರಾಜೇಂದ್ರ ಜೋಶಿ, ಅನಂತ ಮಳಗಿ, ಭಾಸ್ಕರ ಮನಗೂಳಿ, ರಾಘವೇಂದ್ರ ಗುಮಾಸ್ತೆ, ಗಿರಿಯಾಚಾರ್ಯ, ಎಸ್.ವಿ.ದೇಸಾಯಿ, ಡಾ.ರಾಜೇಂದ್ರ ಜೋಶಿ, ರಾಘವೇಂದ್ರ ಕುಲಕರ್ಣಿ, ಆನಂದ ಕಲಕೇರಿ ಇತರರು ಇದ್ದರು.

# ತೆರಿಗೆ ವಸೂಲಾತಿ ಜಾಥಾ ನಡೆಸಿದ ಪುರಸಭೆ



**ತೇರದಾಳ :** ಸಾರ್ವಜನಿಕರು ಪುರಸಭೆಗೆ ಸಂದಾಯ ಮಾಡಬೇಕಾಗಿರುವ ತೆರಿಗೆ ಹಣವನ್ನು ಸಕಾಲಕ್ಕೆ ಪಾವತಿಸುವಂತೆ ಶನಿವಾರ ಪುರಸಭೆ ಮುಖ್ಯಾಧಿಕಾರಿ, ಸಿಬ್ಬಂದಿ ಹಾಗೂ ಪೌರ ಕಾರ್ಮಿಕರು ಪಟ್ಟಣದಲ್ಲಿ ಜನ ಜಾಗೃತಿ ಜಾಥಾ ನಡೆಸಿದರು.

ಪುರಸಭೆಯಿಂದ ಪ್ರಾರಂಭಗೊಂಡ ಜಾಥಾ, ಜಾಮೀಯಾ ಮಸೀದಿ, ವಿಶೇಷ ತಹಸೀಲ್ದಾರ್ ಕಚೇರಿ, ಸರಕಾರಿ ಚಾವಡಿ, ಕನ್ನಡ ಶಾಲೆ, ಜವಳಿ ಬಜಾರ, ಸಿದ್ದೇಶ್ವರ ಓಣಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಸಾರ್ವಜನಿಕರು ತೆರಿಗೆ ಹಣ ಪಾವತಿಸಿದಾಗ ಮಾತ್ರ ಪುರಸಭೆ ವತಿಯಿಂದ ಮೂಲಭೂತ ಸೌಲಭ್ಯ ಒದಗಿಸಲು ಸಾಧ್ಯ. ಆಸ್ತಿ ತೆರಿಗೆ, ನೀರಿನ ಕರ, ಲೈಸೆನ್ಸ್ ನವೀಕರಣ ಕಡ್ಡಾಯವಾಗಿ ಮಾಡಿಕೊಳ್ಳಬೇಕು. ಅದರಂತೆ ಕಟ್ಟಡ ಪರವಾನಿಗೆ ತೆಗೆದುಕೊಳ್ಳದೆ ಹಲವರು ಕಟ್ಟಡಗಳನ್ನು ನಿರ್ಮಿಸುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಅಂತಹವರು ತಾವಾಗಿಯೇ ಬಂದು ಕಟ್ಟಡ ಅನುಮತಿ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ತೆರಿಗೆ ಹಣ ಬಾಕಿ ಉಳಿಸಿಕೊಂಡವರಿಗೆ ಈಗಾಗಲೇ ನೋಟಿಸ್ ನೀಡಲಾಗುತ್ತಿದೆ. ತಕ್ಷಣವೇ ಬಾಕಿ ಹಣ ಪಾವತಿಸಬೇಕು. ಅನಧಿಕೃತ ನಳ ಜೋಡಣೆ ಹೊಂದಿದವರು ಅಧಿಕೃತವಾಗಿ ಮಾಡಿಕೊಳ್ಳಬೇಕೆಂದು ಸೂಚಿಸಿದ್ದಾರೆ. ಸಾರ್ವಜನಿಕರು ತೆರಿಗೆ ಹಣ ಪಾವತಿಸುವ ಮೂಲಕ ಪುರಸಭೆಗೆ ಸಹಕಾರ ನೀಡಿದಾಗ ಮಾತ್ರ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತದೆ. ಎಲ್ಲವನ್ನು ಸರಕಾರದ ಅನುದಾನದಲ್ಲಿಯೇ ಮಾಡಲು ಸಾಧ್ಯ ಇಲ್ಲ ಎಂದು ತಿಳಿಸಿದರು. ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಕಂದಾಯ ಅಧಿಕಾರಿ ಎಫ್. ಬಿ. ಗಿಡ್ಡಿ ಹಾಜರಿದ್ದರು.

# ಸಹಬಾಳ್ವೆ ಮೂಲಕ ಶಾಂತಿ ಮೂಡಿಸಲು ಸಾಧ್ಯ



**ರಬಕವಿ–ಬನಹಟ್ಟಿ:** ಸರ್ವ ಜನಾಂಗದ ಸಹಬಾಳ್ವೆಯ ಮೂಲಕ ಜಗತ್ತಿನಲ್ಲಿ ಶಾಂತಿಯನ್ನು ಮೂಡಿಸಲು ಸಾಧ್ಯವಾಗುತ್ತದೆ ಎಂದು ಯಲ್ಲಟ್ಟಿಯ ಕೊಣ್ಣೂರ ಸಮೂಹ ಶಿಕ್ಷಣ ಸಂಸ್ಥೆಯ ಪ್ರಾಚಾಯ9ರಾದ ಬಸವರಾಜ ಕೊಣ್ಣೂರ ಹೇಳಿದರು.

ಶನಿವಾರ ಸಮೀಪದ ಯಲ್ಲಟ್ಟಿಯ ಕೊಣ್ಣೂರ ಇಂಗ್ಲಿಷ್ ಶಾಲೆಯು ಹಮ್ಮಿಕೊಂಡ ಸರ್ವ ಜನಾಂಗದ ಸಹಬಾಳ್ವೆಗಾಗಿ ಮ್ಯಾರಾಥಾನ್ ಓಟ–2024 ರಲ್ಲಿ ಭಾಗವಹಿಸಿ ಮಾತನಾಡಿದರು.

ಇಂದಿನ ಮಕ್ಕಳಲ್ಲಿ ಪರಸ್ಪರ ಸಹಬಾಳ್ವೆಯ ಮನೋಭಾವನೆಯನ್ನು ಬೆಳೆಸುವುದು ಮುಖ್ಯವಾಗಿದೆ. ಮಕ್ಕಳಲ್ಲಿ ಸ್ವಾಸ್ಥ್ಯ ಕೂಡಾ ಮುಖ್ಯವಾಗಿದೆ. ಮಕ್ಕಳು ತಮ್ಮ ಉತ್ತಮ ಆರೋಗ್ಯಕ್ಕಾಗಿ ದಿನ ನಿತ್ಯ ಯೋಗ, ವ್ಯಾಯಾಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಉತ್ತಮ ಆರೋಗ್ಯದಿಂದ ಉತ್ತಮ ಸಾಧನೆಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ಶಾಸಕ ಕೊಣ್ಣೂರ ತಿಳಿಸಿದರು.

ಕೊಣ್ಣೂರ ಇಂಗ್ಲಿಷ್ ಮಾಧ್ಯಮದ 700 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮ್ಯಾರಾಥಾನ್ ಓಟದಲ್ಲಿ ಭಾಗವಹಿಸಿದ್ದರು. ಸರ್ವ ಜನಾಂಗದ ಸಹಬಾಳ್ವೆಯ ಕುರಿತು ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡಿದರು.

ಬನಹಟ್ಟಿಯ ಬಾಣಕಾರ ಟೆಕ್ಸಟೈಲ್ದಿಂದ ಆರಂಭಗೊಂಡ ಮ್ಯಾರಾಥಾನ್ ಯಲ್ಲಟ್ಟಿಯ ಶಾಲೆಯವರೆಗೆ ನಡೆಯಿತು. ಮ್ಯಾರಾಥಾನ್ ಓಟ–2024 ಕ್ಕೆ ಗಣ್ಯವಾಪಾರಸ್ಥರಾದ ಸುರೇಶ ಚಿಂಡಕ ಚಾಲನೆ ನೀಡಿದರು.

ನಂತರ ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ಉಪಕುಲಪತಿ ಡಾ. ಬಿ. ಎಂ. ಪಾಟೀಲ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ನಿಖೀಲ ಕೊಣ್ಣೂರ, ಧರೆಪ್ಪ ಉಳ್ಳಾಗಡ್ಡಿ, ವಸಂತ ಹಜಾರೆ, ಡಾ. ಎಸ್. ಎಸ್. ಹೂಲಿ, ಸುರೇಶ ಚಿಂಡಕ, ಪ್ರಭು ಪೂಜಾರಿ, ಶ್ರೀಶೈಲ ಉಳ್ಳಾಗಡ್ಡಿ, ಈಶ್ವರ ಕಡೆಮನಿ, ಗೋಪಾಲ ಭಟ್ಟಡ, ರಾಜೇಶ ನೋಟದ, ಎಂ. ಬಿ. ಮಗದುಮ, ಬದ್ರಿನಾರಾಯಣ ಲಡ್ಡಾ, ಈರಯ್ಯಾ ಕಾಡದೇವರ, ದುಂಡಯ್ಯ ಮಠದ, ಎಫ್. ಬಿ. ತಳವಾರ, ಮುರಲಿ ಕಾಬ್ರಾ, ವಕೀಲರಾದ ವೆಂಕಟೇಶ ನಿಂಗಸಾನಿ, ಈರಣ್ಣ ಯಾದವಾಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಕಲಬುರಗಿ ವತಿಯಿಂದ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯ ಪ್ರವೇಶಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಕಲಬುರಗಿಯಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್ ಮೆಂಟ್ ತರಬೇತಿ ಸಂಸ್ಥೆ ನಡೆಸುತ್ತಿದ್ದು, ಈ ತರಬೇತಿ ಸಂಸ್ಥೆಯ ಮೂಲಕ ಸಹಕಾರ ಸಂಘ ಸಂಸ್ಥೆ, ಸಹಕಾರ ಇಲಾಖೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿ ಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಗೆ "6 ತಿಂಗಳು/180" ದಿನಗಳ ಅವಧಿಯ "ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್" ತರಬೇತಿಯನ್ನು ಜನವರಿ–2025 ರಿಂದ ಪ್ರಾರಂಭವಾಗುತ್ತಿದ್ದು. ಈ ತರಬೇತಿಯನ್ನು ಪಡೆಯಲಿಚ್ಚಿಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಬಹುದಾಗಿದೆ.

ಈ ತರಬೇತಿಯನ್ನು ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸಹಕಾರ ಸಂಘ, ಸಹಕಾರ ಇಲಾಖೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ವೇತನ ಪಡೆಯುವ ನೌಕರರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೆ ನಿಯಮಿತವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ವಯೋಮಿತಿ 16 ವರ್ಷ ದಾಟಿದವರಾಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇಕಡ 18 ರಷ್ಟು ಸ್ಥಾನಗಳನ್ನು ತರಬೇತಿಗಾಗಿ ಮೀಸಲಿರಿಸಲಾಗಿರುತ್ತದೆ. ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರಿಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ಅನುತ್ತೀರ್ಣರಾಗಿ, ಸಹಕಾರಿ ಸಂಘಗಳಲ್ಲಿ ಒಂದು ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯೂ ಸಹ ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ. ಇಂತಹ ಅಭ್ಯರ್ಥಿಗಳು ಮಾತ್ರ ತರಬೇತಿಗಾಗಿ ಅರ್ಜಿ ಸಲ್ಲಿಸಬಹುದು. ಈ ತರಬೇತಿಯಲ್ಲಿ ಅಭ್ಯರ್ಥಿಗಳಿಗೆ ಮಾಹೆಯಾನ ರೂ.500 ಶಿಷ್ಯವೇತನವನ್ನು ನೀಡಲಾಗುವುದು.

ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ "6 ತಿಂಗಳು/180 ದಿನಗಳ" ವಿಶೇಷ "ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್" ತರಬೇತಿಯನ್ನು ಸಹ ನೀಡಲಾಗುವುದು. ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರವರ ಮೂಲಕ ಅಥವಾ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರಿಕ್ಷೇಯಲ್ಲಿ ಉತ್ತೀರ್ಣರಾಗಿರಬೇಕು. ವಯೋಮಿತಿ 16 ವರ್ಷಗಳಾಗಿರಬೇಕು. ಗರಿಷ್ಠ 30 ವರ್ಷಗಳು ಮೀರಿರಬಾರದು. ಈ ಅಭ್ಯರ್ಥಿಗಳಿಗೆ ಮಾಹೆಯಾನ ರೂ.600 ಶಿಷ್ಯವೇತನವನ್ನು ನೀಡಲಾಗುವುದು.

ಡಿ.ಸಿ.ಎಂ.ತರಬೇತಿಯಅರ್ಜಿಫಾರಂಮತ್ತುವಿವರಣಾ ಪುಸ್ತಕವನ್ನು ಕಲಬುರಗಿ ತರಬೇತಿ ಸಂಸ್ಥೆಯಿಂದ ಹಾಗೂ ತರಬೇತಿ ಸಂಸ್ಥೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಸಹಕಾರ ಯೂನಿಯನ್‌ಗಳಲ್ಲಿ (ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಹೊಸಪೇಟೆ) ಪಡೆಯಬಹುದು ತರಬೇತಿಯ ಅರ್ಜಿಯನ್ನು ಭರ್ತಿಮಾಡಿ ಡಿಸೆಂಬರ್ 31ರ ಒಳಗಾಗಿ ಪ್ರಾಂಶುಪಾಲರು, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಆದರ್ಶನಗರ, ಪ್ರಗತಿ ಕಾಲೋನಿ, ಸೇಡಂ ರಸ್ತೆ ಕಲಬುರಗಿ–585105, ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08472–245340, ಮೊ.ಸಂ. 9916726886, 9742307153, 9113916753 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡೆಂಗಿಜ್ವರ ಪತ್ತೆ ಪರಿಕ್ಷೆಗಾಗಿ ದರಗಳ ಮರು ನಿಗದಿ

**ಕೊಪ್ಪಳ :** ಕೊಪ್ಪಳ ಜಿಲ್ಲೆಯಲ್ಲಿ ಡೆಂಗಿಜ್ವರ ಪತ್ತೆ ಹಚ್ಚುವ ಪರಿಕ್ಷೆಗಳಾದ ಎಲಿಸಾ ಹಾಗೂ ರಾಪಿಡ್ ಟೆಸ್ಟ್‌ಗಳ ದರವನ್ನು ಮರುನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಲಿಂಗರಾಜು.ಟಿ ಅವರು ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಡೆಂಗಿಜ್ವರ ಪತ್ತೆ ಹಚ್ಚುವ ಎಲಿಸಾ **(ELISA)** ಹಾಗೂ ರಾಪಿಡ್ ಟೆಸ್ಟ್ (Rapid Test)ಗಳ ದರವನ್ನು ನಿಗದಿಗೊಳಿಸಲಾಗಿತ್ತು ಮತ್ತು ಖಾಸಗಿ ಆಸ್ಪತ್ರೆಗಳು ಹಾಗೂ ಪ್ರಯೋಗಶಾಲೆಗಳ/ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಗಳು ಡೆಂಗಿಜ್ವರ ಪತ್ತೆಹಚ್ಚುವ ಪರೀಕ್ಷೆಗಳಿಗೆ ವಿವಿಧ ದರಗಳನ್ನು ವಿಧಿಸಲಾಗುತ್ತದೆ. ಆದರೆ ಡೆಂಗಿಜ್ವರ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಡೆಂಗಿಜ್ವರ ಪತ್ತೆ ಹಚ್ಚುವ ಎಲಿಸಾ ಹಾಗೂ ರಾಪಿಡ್ ಟೆಸ್ಟ್‌ಗಳ ದರಗಳನ್ನು (ಸ್ಕ್ರೀನಿಂಗ್ ಟೆಸ್ಟ್) ಪರಿಷ್ಕರಿಸಿ, ದರ ನಿಗದಿಪಡಿಸುವಂತೆ ಸರ್ಕಾರವು ಆದೇಶಿಸಿದೆ.

ಡೆಂಗ್ಯೂ ಎಲಿಸಾ ಎನ್‌ಎಸ್1 ಪರೀಕ್ಷೆಗೆ ರೂ.300, ಎಲಿಸಾ ಐಜಿಎಂ ಪರೀಕ್ಷೆಗೆ ರೂ.300 ಹಾಗೂ ಸ್ಕ್ರೀನಿಂಗ್ ಟೆಸ್ಟ್: ರಾಪಿಡ್ ಕಾರ್ಡ್ ಟೆಸ್ಟ್ ಫಾರ್ ಎನ್‌ಎಸ್1 ಐಜಿಎಂ & ಐಜಿಜಿ ಪರೀಕ್ಷೆಗಳಿಗೆ ರೂ. 250 ದರಗಳನ್ನು ಮರುನಿಗದಿಗೊಳಿಸಿದೆ. ಜಿಲ್ಲೆಯ ಎಲ್ಲಾ ಖಾಸಗಿ ಆಸ್ಪತ್ರೆಗಳು, ಖಾಸಗಿ ಪ್ರಯೋಗಶಾಲೆಗಳು, ಡಯಾಗ್ನೋಸ್ಟಿಕ್ ಲ್ಯಾಬ್‌ಗಳು ಡೆಂಗಿ ಜ್ವರ ಪತ್ತೆ ಹಚ್ಚುವ ಪರೀಕ್ಷೆಯ ಪರಿಷ್ಕೃತ ದರಗಳ ಆದೇಶವನ್ನು ಕಡ್ಡಾಯವಾಗಿ ಪಾಲಿಸುವಂತೆ ಪ್ರಕಟಣೆ ತಿಳಿಸಿದೆ.

# ಹಾಯ್ಕು ಕನ್ನಡ ಸಾಹಿತ್ಯದಲ್ಲಿ ಬೆಳೆಯುತ್ತಿದೆ

**ರಬಕವಿ–ಬನಹಟ್ಟಿ :** ಇತ್ತೀಚೆಗೆ ಬಹುಶಃ ಹಾಯ್ಕುವಿನಷ್ಟು ಪ್ರಯೋಗ ಬೇರೆ ಪ್ರಕಾರದಲ್ಲಿ ಆಗುತ್ತಿಲ್ಲ ಎನ್ನುವ ಮಟ್ಟಿಗೆ ಹಾಯ್ಕು ಸಾಹಿತ್ಯ ಕನ್ನಡದಲ್ಲಿ ನಡೆಯುತ್ತಿದೆ. ನಿಗದಿತ ಅಕ್ಷರಗಳಲ್ಲಿಯೇ ಅಗಾಧತೆಯನ್ನು ಹೇಳುವ ಹಾಯ್ಕು ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿರುವ ಸಾಹಿತ್ಯವಾಗಿದೆ ಎಂದು ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ತಿಳಿಸಿದರು.

ಅವರು ಭಾನುವಾರ ಸಮೀಪದ ಹೊಸೂರಿನ ಪದ್ಮಾವತಿ ಅಂತರರಾಷ್ಟ್ರೀಯ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ಅಭಿನಂದನಾ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಉಪನ್ಯಾಸಕ ಗಂಗಾಧರ ಅವಟೇರ ರಚಿಸಿದ 'ದಾರಿಬುತ್ತಿ' ಹಾಯ್ಕುಗಳು ಕೃತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು. ಈ ಕೃತಿಯಲ್ಲಿ ಪ್ರಕೃತಿ, ಪ್ರೀತಿ, ಪ್ರೇಮ, ವಿರಹ, ಆಧ್ಯಾತ್ಮದೊಂದಿಗೆ ವರ್ತಮಾನದ ಅನೇಕ ಸಂಗತಿಗಳನ್ನು ಸಶಕ್ತವಾಗಿ ಕೃತಿಕಾರ ಗಂಗಾಧರ ಅವಟೇರ ರಚಿಸಿದ್ದಾರೆ. ಹದಿನೇಳನೇ ಶತಮಾನದಲ್ಲಿ ಜಪಾನ ದೇಶದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದುಕೊಂಡ ಸಾಹಿತ್ಯವನ್ನು 21 ನೇ ಶತಮಾನದಲ್ಲಿ ಸಾಕಷ್ಟು ಜನರು ಬರೆಯುತ್ತಿದ್ದಾರೆ. ಕನ್ನಡದಲ್ಲಿಯೂ ಕೂಡಾ ಸಾಕಷ್ಟು ಜನರು ಹಾಯ್ಕುಗಳನ್ನು ಬರೆಯುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಇಂಥ ಕೃತಿಯನ್ನು ಅಭಿನಂದನಾ ಸಮಾರಂಭದಲ್ಲಿ ಬಿಡುಗಡೆ ಮಾಡುತ್ತಿರುವುದು ಮತ್ತೊಂದು ಹೆಮ್ಮೆಯ ಸಂಗತಿಯಾಗಿದೆ ಎಂದು ಶೆಲ್ಲಿಕೇರಿ ತಿಳಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ. ಕೃ. ಮೇಗಾಡಿ, ಕೃತಿಕಾರ ಗಂಗಾಧರ ಅವಟೇರ ಮಾತನಾಡಿದರು.

ಡಾ. ಮಲ್ಲಿಕಾರ್ಜುನ ಜವಳಗಿ, ಸತೀಶ ಹಜಾರೆ, ಸಿ.ಎಂ.ಜೋಶಿ, ಜಿ.ಎಸ್. ವಡಗಾಂವಿ, ಗುರುನಾಥ ಸುತಾರ, ಮಲ್ಲಿಕಾರ್ಜುನ ಇಂಡಿ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕು ಪರಿಷತ್ತಿನ ಪದಾಧಿಕಾರಿಗಳು ಹಾಜರಿದ್ದರು.

# ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ವಿಜ್ಞಾನ ವಸ್ತು ಪ್ರದರ್ಶನ ಪೂರಕ: ಮಲಗೌಡ ಝುರೆ



**ಅಥಣಿ :** ವಿದ್ಯಾರ್ಥಿಗಳಿಗೆ ವೈಜ್ಞಾನಿಕವಾಗಿ. ಗುಣಾತ್ಮಕವಾಗಿ ಹಾಗೂ ರಚನಾತ್ಮಕವಾಗಿ ಶಿಕ್ಷಣ ದೊರೆಯಬೇಕಾದರೆ. ಮಕ್ಕಳು ಪಠ್ಯಪುಸ್ತಕಗಳನ್ನು ಓದಿಗೆ ಮಾತ್ರ ಸೀಮಿತವಾಗದೆ. ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಅಗತ್ಯ ಈ ನಿಟ್ಟಿನಲ್ಲಿ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಿರುವದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಕೆಎಎಸ್ ಅಧಿಕಾರಿ ಮಲಗೌಡ ಝುರೆ ಹೇಳಿದರು. ಅವರು ಇಲ್ಲಿನ ಕೆಎಲ್ ಇ ಸಂಸ್ಥೆಯ ಎಸ್ ಎಸ್ ಎಮ್ ಎಸ್ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ತಾಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವ ಬೆಳಸಿಕೊಂಡು ದೇಶದ ಅಭಿವೃದ್ದಿಯಲ್ಲಿ ಪಾಲುದಾರರರಾಗಬೇಕು. ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಹೆಚ್ಚಿಸುವುದರ ಜೊತೆಗೆ ಸೃಜನಶೀಲತೆ, ಕೌಶಲ್ಯ ಹಾಗೂ ಕ್ರೀಯಾಶಿಲತೆಯನ್ನು ವ್ಯಕ್ತಪಡಿಸಲು ಒಂದು ವೇದಿಕೆ ದೊರೆಯುತ್ತದೆ ಎನ್ನುವ ಸದುದ್ದೇಶದಿಂದ ವಿದ್ಯಾರ್ಥಿಗಳು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು' ಎಂದರು

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ದೊರಕಬೇಕು. ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆಗಳನ್ನು ಪಡೆದುಕೊಳ್ಳುವ ಮೂಲಕ ಸಮಾಜಮುಖಿ ಸೇವೆಗಳನ್ನ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಹಂಜಿ ಮಾತನಾಡಿ ವೈಜ್ಞಾನಿಕವಾಗಿ ತಾಂತ್ರಿಕವಾಗಿ ಬೆಳೆಯುತ್ತಿರುವ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿಜ್ಞಾನ ಶಿಕ್ಷಣದ ಅವಶ್ಯಕತೆ ಇಂದಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಅದರಲ್ಲೂ ಮಕ್ಕಳಿಗೆ ಪ್ರೌಢಶಾಲಾ ಹಂತದಲ್ಲೆ? ವಿಜ್ಞಾನ ಶಿಕ್ಷಣದ ಬಗ್ಗೆ ಅಭಿರುಚಿ ಬೆಳೆಸುವುದು ಅತ್ಯವಶ್ಯಕವಾಗಿದೆ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಮತ್ತು ವೈಜ್ಞಾನಿಕ ಮನೋಭಾವವನ್ನು ಹೊರಹಾಕಲು ವಿಜ್ಞಾನ ವಸ್ತು ಪ್ರದರ್ಶನ ಇದೊಂದು ಉತ್ತಮ ವೇದಿಕೆಯಾಗಿದೆ ಎಂದ ಅವರು ತಾಲೂಕಿನ 150 ಶಾಲೆಗಳ ವಿದ್ಯಾರ್ಥಿಗಳು ಆಕರ್ಷಕ ವಿಜ್ಞಾನ ವಸ್ತುಗಳನ್ನು ಪ್ರದರ್ಶನ ಮಾಡಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಈ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಒಟ್ಟು 809 ವಿದ್ಯಾರ್ಥಿಗಳು ಭಾಗವಹಿಸಿ ಒಂದು 147 ಮಾದರಿಯ ವಿಜ್ಞಾನ ವಸ್ತುಗಳನ್ನು ಪ್ರದರ್ಶನ ಮಾಡಿದರು. ಮಹಾವಿದ್ಯಾಲಯದ ವಿದ್ಯಾರ್ಥಿಗಳು 12 ಮಳಿಗೆಗಳಲ್ಲಿ ವಿವಿಧ ಬಗೆಯ ಆಹಾರಗಳನ್ನು ತಯಾರಿಸಿ ಪ್ರದರ್ಶನ ಮಾಡಿದರು. ಹಳ್ಳಿಯ ಸೊಗಡು ಬಿಂಬಿಸುವ ನಿಟ್ಟಿನಲ್ಲಿ ಅನೇಕ ವಿದ್ಯಾರ್ಥಿಗಳು ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು.

ಕಾಲೇಜಿನಲ್ಲಿ ವಿದ್ಯಾರ್ಥಿಗಳು ಚಂದ್ರಯಾನ ? 3. ಸೌರಶಕ್ತಿಯ ಉಪಯೋಗ, ಮಳೆಯನೀರಿನ ಕೊಯ್ಲು, ಗಾಳಿಯ ಯಂತ್ರಗಳು, ಮಾನವ ದೇಹದ ವ್ಯವಸ್ಥೆ, ಸ್ಮಾರ್ಟ್ ಸಿಟಿ. ಹನಿನೀರಾವರಿಯ ವಿಜ್ಞಾನ ಮಾದರಿಗಳನ್ನು ತಯಾರಿಸಿಕೊಂಡು ಬಂದಿದ್ದರು ಕಾಲೇಜಿನ ಆವರಣದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು ಭಾಗವಹಿಸಿದ್ದರು.

ಸಮಾರೋಪ ಸಮಾರಂಭ : ಸಾಯಂಕಾಲ ಜರುಗಿದ ಸಮಾರೋಪ ಸಮಾರಂಭದಲ್ಲಿ ರಾಯಬಾಗ ತಹಶೀಲ್ದಾರ ಸುರೇಶ ಮುಂಜೆ ಮುಖ್ಯ ಅತಿಥಿಗಳಾಗಿ ವಿದ್ಯಾರ್ಥಿಗಳ ವೈಜ್ಞಾನಿಕ ಸಾಧನೆಯನ್ನು ಕಂಡು ಪ್ರಸಂಶೆ ವ್ಯಕ್ತಪಡಿಸಿದರು. ಸ್ಪರ್ಧಾತ್ಮಕ ಯುಗದಲ್ಲಿ ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡುವ ಮೂಲಕ ಹೆತ್ತ ತಂದೆ ತಾಯಿಯ ಕನಸು ನನಸು ಮಾಡಬೇಕು. ಉನ್ನತ ಹುದ್ದೆಗಳನ್ನು ಅಲಂಕರಿಸಿದ ನಂತರ ಕಲಿತ ಶಾಲೆಗೆ ಮತ್ತು ಸಮಾಜಕ್ಕೆ ಉತ್ತಮವಾದ ಸೇವೆಗಳನ್ನ ನೀಡಬೇಕೆಂದು ಸಲಹೆ ನೀಡಿದರು.

ಪದವಿ ಪೂರ್ವ ವಿಭಾಗದ ಪ್ರಾಚಾರ್ಯ ಡಾ. ರೇಷ್ಮಾ ಇನಾಮದಾರ ಪ್ರಾಸ್ತಾವಿಕವಾಗಿ ಮಾತನಾಡಿದರು

ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯ ಎಸ್.ಜಿ.ಮಮದಾಪೂರ ಅಧ್ಯಕ್ಷತೆ ವಹಿಸಿದ್ದರು.

ಪದವಿ ಮಹಾವಿದ್ಯಾಲಯದ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ ಎಸ್ ಕಾಂಬಳೆ, ಉಪ ಪ್ರಾಚಾರ್ಯ ಡಾ, ಪ್ರಶಾಂತ ಮಗದುಮ, ಸಂಯೋಜಕ ಬಿ. ಆರ್. ರಾಠೋಡ ಉಪಸ್ಥಿತರಿದ್ದರು.

ಡಾ. ರೇಷ್ಮಾ ಇನಾಮದಾರ ಸ್ವಾಗತಿಸಿ ಪರಿಚಯಿಸಿದರು. ಪೂರ್ಣಿಮಾ ಮಿಣಚಿ ನಿರೂಪಿಸಿದರು. ಗೌರಿ ಕುಲಕರ್ಣಿ ವಂದಿಸಿದರು.

# ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಮಹಾಮಂಡಳ ನೂತನ ಉಪಾಧ್ಯಕ್ಷರಾಗಿ ಕಾಶಿನಾಥ ಹುಡೇದ ಆಯ್ಕೆ



**ಲೋಕಾಪುರ :** ರಾಜ್ಯ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಮಹಾಮಂಡಳದ ಸತತ ಎರಡನೇ ಬಾರಿಉಪಾಧ್ಯಕ್ಷರಾಗಿಅವಿರೋಧವಾಗಿಆಯ್ಕೆಯಾದ ಲೋಕಾಪುರ ಪಟ್ಟಣದ ಕಾಶಿನಾಥ ಹುಡೇದ ರವರು ಸೋಮವಾರ ಬೆಂಗಳೂರಿನ ರಾಜ್ಯ ಸಹಕಾರ ಕುರಿ ಮಹಾಮಂಡಳದಲ್ಲಿ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ರಮೇಶ, ಉಪಾಧ್ಯಕ್ಷ ಸ್ಥಾನಕ್ಕೆ ಕಾಶಿನಾಥ ಹುಡೇದ ಇವರಿಬ್ಬರೆ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಎಚ್.ಎನ್. ಶಿವೇಗೌಡ ಅಧ್ಯಕ್ಷ ಉಪಾಧ್ಯಕ್ಷ ಇಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

# ಉಚಿತ ವಿತರಣೆ ಪುಸ್ತಕಗಳನ್ನು ಖಾಸಗಿ ಶಾಲೆಗಳಿಗೆ ಮಾರಾಟ ಆರೋಪಪುಸ್ತಕ ವಿತರಣಾ ನೋಡಲ್ ಅಧಿಕಾರಿ ಅಮಾನತು



**ಅಥಣಿ :** ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿ ನೀಡಬೇಕಾದ ಪಠ್ಯ ಪುಸ್ತಕಗಳನ್ನು ಖಾಸಗಿ ಶಾಲೆಗಳಿಗೆ ಮಾರಾಟ ಮಾಡುವ ಮೂಲಕ ಬಾರಿ ಅವ್ಯವಹಾರ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಅಥಣಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಶಿಕ್ಷಣ ಸಂಯೋಜಕ ಹಾಗೂ ಪುಸ್ತಕ ವಿತರಣೆಯ ನೋಡಲ್ ಅಧಿಕಾರಿ ಶ್ರೀಶೈಲ ಸನದಿ ಅವರನ್ನು ಅಮಾನತುಗೊಳಿಸಿ ಚಿಕ್ಕೋಡಿ ಡಿಡಿಪಿಐ ಸೀತಾರಾಮು ಆದೇಶ ಹೊರಡಿಸಿದ್ದಾರೆ.

ಅಥಣಿ ಶೈಕ್ಷಣಿಕ ವಲಯದ 01 ರಿಂದ 10 ನೇ ತರಗತಿಯ ಸರ್ಕಾರಿ ಶಾಲೆಗಳ ಮಕ್ಕಳಿಗೆ ಸರ್ಕಾರದಿಂದ ಉಚಿತವಾಗಿ ನೀಡಬೇಕಾದ ಪಠ್ಯ ಪುಸ್ತಕಗಳ ವಿತರಣೆಯಲ್ಲಿ ಇಲ್ಲಿನ ಅಧಿಕಾರಿಗಳು ಗೋಲ್ ಮಾಲ್ ಎಸಗಿರುವ ಆರೋಪ ಮತ್ತು ದೂರುಗಳು ಕೇಳಿ ಬಂದಿದ್ದವು. ಈ ದೂರುಗಳನ್ನು ಆಧರಿಸಿ ಚಿಕ್ಕೋಡಿ ಡಿಡಿಪಿಐ ಸೀತಾರಾಮು ಅವರು ತ್ವರಿತಗತಿಯಲ್ಲಿ ತನಿಖಾ ತಂಡವನ್ನು ನೇಮಿಸಿ ಪಠ್ಯ ಪುಸ್ತಕ ವಿತರಣೆಯಲ್ಲಿ ಆಗಿರುವ ಗೋಲ್ ಮಾಲ್ ಬಗ್ಗೆ ತನಿಖೆ ನಡೆಸುವಂತೆ ಸೂಚನೆ ನೀಡಿದ್ದರು. ಅದರ ವಿಚಾರಣೆಗಾಗಿ ಚಿಕ್ಕೋಡಿ ಡಿಡಿಪಿಐ ಕಚೇರಿಯಿಂದ ಡಯಟ್ ಅಧಿಕಾರಿಗಳು ಒಳಗೊಂಡಂತೆ ಐವರು ಅಧಿಕಾರಿಗಳನ್ನೊಳಗೊಂಡ 25 ಸದಸ್ಯರ ತಂಡಗಳನ್ನು ರಚಿಸಿ ವಿಚಾರಣೆ ನಡೆಸಲಾಗಿತ್ತು. ಐದು ದಿನಗಳ ಕಾಲ ವಿಚಾರಣೆ ನಡೆಸಿದ ಅಧಿಕಾರಿಗಳು ಅಥಣಿ ತಾಲೂಕಿನಲ್ಲಿ ಸರಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ತಲುಪಿಸಬೇಕಾದ ಪಠ್ಯಪುಸ್ತಕಗಳನ್ನು ಹಣದ ಆಸೆಗಾಗಿ ಖಾಸಗಿ ಶಾಲೆಗಳಿಗೆ ಮಾರಾಟ ಮಾಡುವ ಮೂಲಕ ಭಾರಿ ಪ್ರಮಾಣದ ಅವ್ಯವಹಾರ ನಡೆಸಿರುವುದು ಸಾಬೀತಾಗಿದೆ.

ಈ ಬಗ್ಗೆ ತನಿಖಾ ತಂಡವು ಡಿಡಿಪಿಐ ಅವರಿಗೆ ವರದಿ ಸಲ್ಲಿಸಿದ ಹಿನ್ನೆಲೆಯಲ್ಲಿ ಚಿಕ್ಕೋಡಿ ಡಿಡಿಪಿಐ ಸೀತಾರಾಮು ಅವರು ಶನಿವಾರ ಅಥಣಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಶಿಕ್ಷಣ ಸಂಯೋಜಕ ಮತ್ತು ಪಠ್ಯಪುಸ್ತಕ ವಿತರಣೆ ನೋಡಲ್ ಅಧಿಕಾರಿ ಶ್ರೀಶೈಲ ಸನದಿ ಅವರನ್ನ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಎಂ ಬಿ ಮೋರಟಗಿ ಅವರು ಕೂಡ ಈ ಅವ್ಯವಹಾರಕ್ಕೆ ಸಹಕಾರ ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ ಅವರ ಮೇಲು ಶಿಸ್ತು ಕ್ರಮ ಕೈಗೊಳ್ಳುವಂತೆ ಧಾರವಾಡ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಶಿಫಾರಸು ಮಾಡಿದ್ದಾರೆ.

# ನಾನು ಎಂದಿಗೂ ಪಂಚಮಸಾಲಿ ಸಮುದಾಯದ ಪರ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್

**ಬೆಳಗಾವಿ :** ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ನಾನು ಎಂದಿಗೂ ಸಮುದಾಯದ ಪರ ನಿಲ್ಲುತ್ತೇನೆ. ಅಧಿಕಾರಕ್ಕಿಂತ ಸಮಾಜದ ಹಿತಾಸಕ್ತಿ ಮುಖ್ಯ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಸುವರ್ಣ ಸೌಧದ ಮುಂಭಾಗ ಮಂಗಳವಾರ ನಡೆದ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಲಿಂಗಾಯತ ಪಂಚಮಸಾಲಿ ಸಮಾಜ ಹಾಗೂ ವಕೀಲರ ಪ್ರತಿಭಟನೆಯಲ್ಲಿ ಪಾಲ್ಗೊಂಡ ಸಚಿವರು, ಸಮಾಜಕ್ಕೆ ನ್ಯಾಯ ಸಿಕ್ಕೇ ಸಿಗುತ್ತದೆ ಎಂದರು.

ಸಮಾಜ ಇದ್ದರೆ ನಾವೆಲ್ಲ ಇರುತ್ತೇವೆ. ಮುಖಂಡರಿಗೆ ಎಲ್ಲ ವಿಚಾರ ಹೇಳಿದ್ದೇನೆ. ಸರಕಾರ ಯಾವುದೇ ಇರಲಿ, ಪಂಚಮಸಾಲಿ ಸಮಾಜದ ಬಹಳಷ್ಟು ಜನ ಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಸಮಾಜಕ್ಕೆ ನ್ಯಾಯ ಸಿಗಬೇಕು. ಹಿಂದೆಯೂ ಇದೇ ದಾಟಿಯಲ್ಲಿ ಮಾತನಾಡಿದ್ದೇನೆ. ಇಂದೂ ಅದೇ ದಾಟಿಯಲ್ಲಿ ಮಾತನಾಡುತ್ತೇನೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಸಮಾಜದ ಮಗಳಾಗಿ ಹೇಳುವೆ, ನನ್ನ ಸಮಾಜಕ್ಕೆ ನ್ಯಾಯಸಿಗಬೇಕು.

ಮೀಸಲಾತಿ ವಿಚಾರವಾಗಿ ಪದೇ ಪದೆ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಸಮಾಜ ಹೇಳುವ ದಿಕ್ಕಿನಲ್ಲೇ ನಾನೂ ಸಾಗುತ್ತೇನೆ. 2 ಎ ಮೀಸಲಾತಿ ಸಿಗಲಿ, ಖಂಡಿತ ಹೋರಾಟಕ್ಕೆ ಜಯ ಸಿಗುತ್ತದೆ ಎಂದು ಭರವಸೆ ವ್ಯಕ್ತಪಡಿಸಿದರು.

ಈ ವೇಳೆ ಶಾಸಕರಾದ ಬಾಬಾ ಸಾಹೇಬ್ ಪಾಟೀಲ್, ಮಾಜಿ ಸಚಿವರಾದ ಎ.ಬಿ.ಪಾಟೀಲ್, ಶಶಿಕಾಂತ್ ನಾಯ್ಕ್, ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ್, ಸಿ.ಸಿ.ಪಾಟೀಲ್, ಶಶಿಕಲಾ ಜೊಲ್ಲೆ, ರಾಜ್ಯಸಭಾ ಸದಸ್ಯರಾದ ಈರಣ್ಣ ಕಡಾಡಿ, ವಿಧಾನಪರಿಷತ್ ಸದಸ್ಯರಾದ ಚನ್ನರಾಜ್ ಹಟ್ಟಿಹೊಳಿ, ಯುವ ಕಾಂಗ್ರೆಸ್ ಮುಖಂಡರಾದ ಮೃಣಾಲ್ ಹೆಬ್ಬಾಳಕರ್, ಡಾ.ಮಹಾಂತೇಶ್ ಕಡಾಡಿ, ಮಾಜಿ ಶಾಸಕ ವಿ.ಆಯ್.ಪಾಟೀಲ್, ಮಹಾಂತೇಶ್ ಮತ್ತಿಕೊಪ್ಪ ಉಪಸ್ಥಿತರಿದ್ದರು.

ಸ್ಥಳಕ್ಕೆ ಸಚಿವರ ನಿಯೋಗ ಭೇಟಿ

ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಡಾ.ಎಂ.ಸಿ.ಸುಧಾಕರ್ ಒಳಗೊಂಡ ಸಚಿವರ ನಿಯೋಗ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಪ್ರತಿಭಟನಾಕಾರರ ಮನವಿ ಆಲಿಸಿದರು.

# ಸಂತ್ರಸ್ತರ ಹೋರಾಟಕ್ಕೆ ಬಾಗಲಕೋಟ ಜಿಲ್ಲೆಯ ಮಹಿಳೆಯರ ಬೆಂಬಲ



**ಜಮಖಂಡಿ :** ಬಾಗಲಕೋಟೆಯ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಬಾಗಲಕೋಟ, ಬೆಳಗಾವಿ, ಬೆಳಗಾವಿ ಭಾಗದ ಕೃಷ್ಣಾ ಮೇಲ್ದಂಡೆ ಯೋಜನಾ ಬಾಧಿತ ಸಂತ್ರಸ್ತರ ಹೋರಾಟ ಸಮೀತಿ ಅಧ್ಯಕ್ಷರಿಗೆ ಬಾಗಲಕೋಟೆ ಜಿಲ್ಲೆಯ ಮಹಿಳೆಯರು ಬೆಂಬಲ ನೀಡಿದರು.

ಈ ಸಂದರ್ಭದಲ್ಲಿ ಡಾ.ವಿಜಯಲಕ್ಷ್ಮೀ ತುಂಗಳ, ಗೀತಾ ಸೂರ್ಯವಂಶಿ, ಕಾವೇರಿ ರಾಠೋಡ, ಶೋಭಾ ರಾಠೋಡ, ಸುಜಾತಾ ಶಿಂಧೆ, ಎಸ್. ಆರ್. ನಾಗರಾಳ, ಕಲಾವತಿ ಅರಕೇರಿ, ಪದ್ಮಾವತಿ ಗುಮ್ಮಟಿ, ಇಂದ್ರವ್ವ ಬಳಮಟ್ಟಿ, ಶಾಮಾಲಾ ಪೂಜಾರಿ,

ಅನಸವ್ವ ಅಗಸರ, ತನುಜಾ ದೊಡಮನಿ, ಅನಸವ್ವ ಬಳಮಟ್ಟಿ, ಕವಿತಾ ಲಗಳಿ, ಜಯಶ್ರೀ ಖಾಂಡೆ, ರುಕ್ಮಿಣಿ ಘಾಟಗೆ ಸಹಿತ ನೂರಾರು ಮಹಿಳೆಯರು ಬೆಂಬಲ ವ್ಯಕ್ತಪಡಿಸಿದ್ದಾರೆ.

# ಕೃಷ್ಣಾ ಮೇಲ್ದಂಡೆ ಯೋಜನೆ ಹೋರಾಟ: ವಕೀಲರ ಬೆಂಬಲ



**ರಬಕವಿ–ಬನಹಟ್ಟಿ :** ಆರು ದಶಕಗಳ ಬೇಡಿಕೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಒಂದೇ ಹಂತದ ಅವಧಿಯಲ್ಲಿ ಇತ್ಯಥ9ಗೊಳಿಸಬೇಕು ಎಂದು ಆಗ್ರಹಿಸಿ, ಬಾಗಲಕೋಟೆಯಲ್ಲಿ ಬಾಧಿತ ಸಂತ್ರಸ್ತರು ಕೈಗೊಂಡ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡುವುದಾಗಿ ರಬಕವಿ ಬನಹಟ್ಟಿ ವಕೀಲರ ಸಂಘದ ಸದಸ್ಯರು ಸೋಮವಾರ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ ಮಾತನಾಡಿ, ಉತ್ತರ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಬಾಗಲಕೋಟೆಯಲ್ಲಿ ನಡೆಸುತ್ತಿರುವ ಹೋರಾಟಕ್ಕೆ ತಮ್ಮ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತ ಪಡಿಸುವುದರ ಜೊತೆಗೆ ನಾವು ಹೋರಾಟದಲ್ಲಿ ಭಾಗವಹಿಸುತ್ತೇವೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆಯು ಆಮೆ ಗತಿಯಲ್ಲಿ ಸಾಗುತ್ತಿದೆ. ಆದಷ್ಟು ಬೇಗನೆ ಈ ಯೋಜನೆಗೆ ತೀವ್ರತೆ ತಂದು ಯೋಜನೆಯನ್ನು ಮುಕ್ತಾಯಗೊಳಿಸಬೇಕು ಮತ್ತು ಯೋಜನೆಯಿಂದ ಬಾಧಿತರಾದ ಸಂತ್ರಸ್ತರ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕು. ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯವನ್ನು ಕೂಡಾ ನಿಗದಿತ ಅವಧಿಯಲ್ಲಿ ಕೈಗೊಳ್ಳಬೇಕು ಎಂದು ಶ್ರೀಕಾಂತ ಕುಲಕರ್ಣಿ ತಿಳಿಸಿದರು.

ವಕೀಲರಾದ ಎ. ಜಿ. ಸಲಬನ್ನವರ, ಈಶ್ವರಚಂದ್ರ ಭೂತಿ, ಜಿ. ಎಸ್. ಅಮ್ಮಣಗಿಮಠ, ಬಸವರಾಜ ಗುರವ, ರಾಜು ಫಕೀರಪೂರ, ರವೀಂದ್ರ ಕಾಮಗೊಂಡ, ಸುಜಾತಾ ನಿಡೋಣಿ, ರಾಘವೇಂದ್ರ ಗೊಳಸಂಗಿ, ನ್ಯಾಮಗೌಡ ವಕೀಲರು ಹಾಜರಿದ್ದರು.

# ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಸಮಗ್ರ ಅಭಿವೃದ್ಧಿಯಾಗಲಿ

ಕರ್ನಾಟಕ ರಾಜ್ಯವು ಕಳೆದ 65 ವರ್ಷಗಳಿಂದ ತನದೇ ಆದಂತಹ ಗತ ವೈಭವವನ್ನು ಹೊಂದಿದೆ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ ಬಂದು 79 ವರ್ಷ ಗತಿಸಿದ್ರು ಕೂಡ ಇನ್ನೂ ಕೂಡ ನರಕ ಸದೃಶದಲ್ಲಿ ನಾವು ಬದುಕ್ತಾ ಇದ್ದೇವೆ ವಿಶೇಷವಾಗಿ ಸಾಮಾಜಿಕ ರಾಜಕೀಯ ಆರ್ಥಿಕವಾಗಿ ಡಿ ನಂಜುಂಡಪ್ಪ ವರದಿ ಅನುಷ್ಠಾನ ಸಂಪೂರ್ಣ ಜಾರಿಯಾಗಿಲ್ಲ ಹಿಂದುಳಿದ ಪ್ರದೇಶಗಳಲ್ಲಿ ಇನ್ನೂ ಅನೇಕ ಒಂದಿಲ್ಲ ಒಂದು ಸಮಸ್ಯೆಗಳು ತಾಂಡವಾಡುತ್ತಿದ್ದೇವೆ. ಎಷ್ಟೋ ಕಡೆ ಸರಿಯಾಗಿ ರಸ್ತೆ ಕುಡಿಯುವ ನೀರು ವಿದ್ಯುತ್ತು ರೈತರಿಗೆ ಸರಿಯಾದ ರೈತ ಸಂಪರ್ಕ ಬಸ್ಸಿನ ಸಂಪರ್ಕ ರೈಲು ವಿಮಾನ ಕೇಂದ್ರಗಳಿಲ್ಲ ರೈತರಿಗೆ ಬೆಳೆದಂಥ ಬೆಂಬಲ ಬೆಲೆ ಸಿಗ್ತಾ ಇಲ್ಲ ರೈತರಿಗೆ ಸಂಕಷ್ಟಕೀಡಾದಾಗ ಮೂಲ ಬೆಂಬಲ ಬೆಲೆ ಸಿಗ್ತಾ ಇಲ್ಲ ಹೀಗೆ ಅನೇಕ ವರ್ಷಗಳಿಂದ ನಮ್ಮ ನಾಳುವ ಜನ ನಾಯಕರು ಮೂರ್ಖರನ್ನಾಗಿ ಮಾಡಿ ತಮ್ಮ ರಾಜಕೀಯ ಬೆಳೆಯನ್ನು ಬೆಳೆಸಿಕೊಳ್ಳುತ್ತಾ ತಮ್ಮ ತಮ್ಮ ಬನಗಳನ್ನು ಗುಂಪುಗಳನ್ನು ಭದ್ರ ಪಡಿಸಿಕೊಂಡು ಚುನಾವಣೆಯಲ್ಲಿ ತಮ್ಮದೇ ಆದಂತಹ ಪ್ರಣಾಳಿಕೆ ಮ್ಯಾನಿಫೆಸ್ಟ್ ರಚನೆ ಮಾಡಿಕೊಂಡು ಬಾಡೂಟ ಬಿರಿಯಾನಿ ಹಬ್ಬದ ಸೀರೆ ಸಾರಾಯಿ ಉಡುಗೊರೆ ದೀಪಸ್ತಂಭ 500 .1000.ಹೀಗೆ ಮತದಾರ ಪ್ರಭುಗಳಿಗೆ ಆಸೆ ಆಮಿಷಗಳನ್ನು ವಡ್ಡಿ ಅನೇಕ ರೀತಿ ನಮ್ಮ ಬಹುಪಾಲು ಉತ್ತರ ಕರ್ನಾಟಕದ 6 ಜಿಲ್ಲೆ ಹಾಗೂ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳು ಒಂದಿಲ್ಲ ಒಂದು ಅನೇಕ ರೀತಿ ಸಮಸ್ಯೆ ವಿಶೇಷವಾಗಿ ಶಿಕ್ಷಣ ಆರೋಗ್ಯ ಮೂಲಭೂತ ಸೌಲಭ್ಯ ಉತ್ತಮವಾದ ಗುಣಮಟ್ಟದ ಶಾಲಾ ಕೊಟ್ಟಡಿ ಗ್ರಂಥಾಲಯ ಕುಡಿಯುವ ನೀರು ಶೌಚಾಲಯ ವಿಶೇಷವಾಗಿ ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣ ಪ್ರಮಾಣದಲ್ಲಿ 60% ಇನ್ನೂ ಕಡಿಮೆ ಶಿಕ್ಷಣ ಪಡೆದುಕೊಳ್ಳುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುನ್ನಡೆ ಆಗಬೇಕು ಹಾಗೂ ಉತ್ತರ ಕರ್ನಾಟಕದಲ್ಲಿ 65 ಪರ್ಸೆಂಟ್ ಉತ್ತೀರ್ಣ ಆಗುವ ವಿದ್ಯಾರ್ಥಿಗಳು ಅವರಿಗೂ ಕೂಡ ಮೂಲಭೂತವಾದಂತಹ ಶೈಕ್ಷಣಿಕ ಅರ್ಹತೆಗಳು ಪಡೆಯುವಂತಹ ಸರ್ಕಾರ ದಕ್ಷಿಣ ಕರ್ನಾಟಕದಂತೆ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಹೆಚ್ಚಿನ ಒತ್ತು ಹಾಗೂ ಅನುದಾನವನ್ನು ನೀಡಿ ಈ ಭಾಗದ ಶೈಕ್ಷಣಿಕ ಕ್ರಾಂತಿ ಸಾಮಾಜಿಕ ಕ್ರಾಂತಿ ಆರ್ಥಿಕ ಕ್ರಾಂತಿ ರಾಜಕೀಯ ಕ್ರಾಂತಿ ಆಗಬೇಕು ಎಂಬುದು ಇಲ್ಲಿ ಉಲ್ಲೇಖನೀಯ ಎಲ್ಲಾ ಹಿರಿಯರ ಹಾಗೂ ಎಲ್ಲಾ ವರ್ಗದ ಎಲ್ಲಾ ಸಮುದಾಯದ ಎಲ್ಲಾ ಪಕ್ಷ ಪಂಗಡಗಳ ಸಂಘಟನೆಗಳ ಹಿರಿಯರ ಒತ್ತಾಸೆ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಆರೋಗ್ಯ ಕೌಶಲ್ಯ ಅಭಿವೃದ್ಧಿ ಪ್ರವಾಸೋದ್ಯಮ ರಸ್ತೆ ಮೂಲಭೂತ ಸೌಲಭ್ಯ ಅದೇ ರೀತಿ ಕೂಡ ಕಲ್ಯಾಣ ಕರ್ನಾಟಕದಲ್ಲಿ ಎಲ್ಲಾ ವ್ಯವಸ್ಥಿತವಾಗಿ ಹೆಚ್ಚಿನ ಅನುದಾನವನ್ನು ಈ ಭಾಗಕ್ಕೆ ನೀಡಿ ಸರ್ವತಮ ಬೆಳವಣಿಗೆ ಕಾರಣವಾಗಬೇಕು ಪ್ರತಿ ವರ್ಷ ಉತ್ತರ ಕರ್ನಾಟಕ ಕಲ್ಯಾಣ ಕರ್ನಾಟಕಕ್ಕೆ ಈ ಭಾಗದ ಬೆಳಗಾವಿ ಸುವರ್ಣ ಸೌಧ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಸ್ಪಂದಿಸುತ್ತೇವೆ ಅಂತ ಹೇಳಿ ಅಧಿವೇಶನ 2 ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್ ನಡೆಯುತ್ತವೆ ಒಂದು ದಿವಸಕ್ಕೆ ಸರಿ ಸುಮಾರು ಲಕ್ಷಕ್ಕಿಂತ ಅಧಿಕ ಹಣ ಬೊಕ್ಕಸದಿಂದ ಹಣ ಕಾಲಿ ಆಗುತ್ತದೆ ಈ ಸಲದ ಒಟ್ಟು ಬೆಳಗಾವಿ ಸುವರ್ಣಸೌಧ ಅಧಿವೇಶನದ ಅಂದ 24 ಕೋಟಿಗಿಂತ ಹೆಚ್ಚು ಕೋಟಿಗಿಂತ ಹೆಚ್ಚು ಸರ್ಕಾರ ಹಣವನ್ನು ಖರ್ಚು ಮಾಡುತ್ತದೆ ನಾವೆಲ್ಲ ಸಾಕಷ್ಟು ಕಷ್ಟಪಟ್ಟು ದುಡಿದು ಸರ್ಕಾರದ ವಿವಿಧ ಇಲಾಖೆ ಕಟ್ಟಿದ ತೆರಿಗೆ ಹಣದ ಮೇಲೆ ಅವರು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಬೇಕಾಬಿಟ್ಟಿ ಹಣವನ್ನು ಪೋಲು ಮಾಡುತ್ತಾ ಮನ ಬಂದಂತೆ ಸಮಯ ಕಳೆದು ಮೂಲಭೂತವಾದಂತಹ ಉತ್ತರ ಕರ್ನಾಟಕ ಸಿಗಬೇಕಾದಂತಹ ಸೌಲಭ್ಯವನ್ನು ನೀಡುವಲ್ಲಿ ವಿಫಲರಾಗುತ್ತಾರೆ ಇಲ್ಲಿವರೆಗೆ ಸರಿ ಸುಮಾರು ಬೆಳಗಾವಿ ಸುವರ್ಣಸೌಧದಲ್ಲಿ 12 ಕಳೆದು 13 ನೆ ಬಾರಿ ಅಧಿವೇಶನ ನಡೆದರೂ ಕೂಡ ಇಲ್ಲಿವರೆಗೆ ಯಾವುದೇ ಪೂರ್ಣ ಉತ್ತರ ಕರ್ನಾಟಕದ ಒಂದೇ ಒಂದು ಕಾಮಗಾರಿಗು ಪೂರ್ಣಗೊಂಡಿಲ್ಲ ವಿಶೇಷವಾಗಿ ಕೃಷ್ಣ ಮೇಲ್ದಂಡೆ ಯೋಜನೆ, ನೀರಿನ ಮಟ್ಟ ಎತ್ತರಿಸುವುದು ಕಲೆಯ ಸಾಹಿತ್ಯ ವಿಜ್ಞಾನ ಕ್ರೀಡೆ ರಾಜಕೀಯ ಶೈಕ್ಷಣಿಕ ಮೂಲ ಸೌಕರ್ಯ ರಸ್ತೆ ಗ್ರಾಮೀಣಾಭಿವೃದ್ಧಿ ರೈತರ ಬೆಂಬಲ ಬೆಲೆ ಹೀಗೆ ಅನೇಕ ಸಾಲು ಸಾಲು ಸಮಸ್ಯೆಗಳು ಕಣ್ಣುಮುಂದುವೆ ಈ ಸಲವಾದರೂ ಇಲ್ಲಿ ನಡೆಯುವ ಚಳಿಗಾಲು ಅಧಿವೇಶನ ಉಪಯೋಗ ಎರಡು ಸದನಗಳು ವಿಧಾನ ಮತ್ತು ಸಭೆ ವಿಧಾನ ಪರಿಷತ್ ಎರಡು ಸದನಗಳ ಜನರ ಪ್ರತಿನಿಧಿಗಳು ನಮ್ಮನ್ನು ಆಳುವ ಹಾಗೂ ನಾವು ಆರಿಸಿ ಕಳಿಹಿಸಿರುವ ಜನಪ್ರತಿನಿಧಿಗಳು ನಮ್ಮ ಉತ್ತರ ಕರ್ನಾಟಕ ಕಲ್ಯಾಣ ಕರ್ನಾಟಕದ ಮೂಲಭೂತ ಸೌಲಭ್ಯ ಹಾಗೂ ಇಲ್ಲಿಯ ಜನರ ಗೋಳು ತೊಂದರೆ ತಾಪತ್ರದ ಬಗ್ಗೆ ಗಮನಹರಿಸಿ ಗದ್ದಲ ಗೋಜು ಮಾಡದೆ ಪವಿತ್ರ ಅಮೂಲ್ಯವಾದಂತ ಸಮಯವನ್ನು ಹಾಳ ಮಾಡದೆ ಅರ್ಥಪೂರ್ಣವಾಗಿ ಶಾಂತಚಿತ್ತವಾಗಿ ಅಧಿವೇಶನ ನಡೆಯಲಿ ಹಾಗೂ ನಮ್ಮ ಉತ್ತರ ಕರ್ನಾಟಕ ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಅನುದಾನ ನೀಡಲಿ ಈ ಭಾಗದಲ್ಲಿ ಬರುವ ಪ್ರಮುಖ ಐದಾರು ಜಿಲ್ಲೆಗಳಿಗೆ ಖುಖುಖಿ ಖುಖ ವೃತ್ತಿಪರ ಉನ್ನತ ಹೆಚ್ಚಿನ ಶಿಕ್ಷಣ ಕೋರ್ಸ್ಗಳು ಹಾಗೂ ಮೆಡಿಕಲ್ ಹಾಗೂ ವೈದ್ಯಕೀಯ ದಂತ ಮಹಾವಿದ್ಯಾಲಯಗಳು ಸಿಕ್ಕು ಈ ಭಾಗದ ಅನೇಕ ವಿದ್ಯಾರ್ಥಿಗಳು ಉತ್ತರ ಕರ್ನಾಟಕವನ್ನು ತೊರೆದು ದೂರದ ದೊಡ್ಡ ದೊಡ್ಡ ಹೈದರಾಬಾದ್ ಚೆನ್ನೈ ಬೆಂಗಳೂರು ಪುಣೆ ಮಂಗಳೂರು ಕೆಲಸಕ್ಕೆ ಗೂಳೆ ಹೋಗೋದು ತಪ್ಪಬೇಕು ಇಲ್ಲೆ ಕೈಗಾರಿಕಾ ಕಂಪನಿಗಳು ಹೆಚ್ಚು ಹೆಚ್ಚು ನಿರ್ಮಾಣವಾಗಬೇಕು ಕೈಗಾರಿಕೆ ಕೂಡ 15% ಇಲ್ಲ ಅತಿ ಹೆಚ್ಚು ಬೆಂಗಳೂರು ಭಾಗದಲ್ಲಿ ಸರಿ ಸುಮಾರು 85 % ಕೈಗಾರಿಕೆಗಳು ಬೆಂಗಳೂರು ಭಾಗದಲ್ಲಿ ನಿರ್ಮಾಣವಾಗುತ್ತದೆ ಈ ಭಾಗದಲ್ಲಿ ಉತ್ತರ ಕರ್ನಾಟಕ ಕಲ್ಯಾಣ ಭಾಗದ ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚು ಕೈಗಾರಿಕಾ ವಸಾಹತುಗಳು ನಿರ್ಮಾಣವಾಗಲಿ ಹಾಗಾದಾಗ ಮಾತ್ರ ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಕೈಗಾರಿಕ ಕ್ರಾಂತಿ ಶಿಕ್ಷಣ ಕ್ರಾಂತಿ ಮುಳುಗುವಂತಾಗಲಿ ಕಳೆದ 65 ವರ್ಷಗಳಿಂದ ಈ ಭಾಗದ ಜನರಿಗೆ ಒಂದ ಇಲ್ಲ ಒಂದು ರೀತಿ ಸಮಸ್ಯೆ ತಾಪತ್ರ ತಪ್ಪಿದ್ದಲ್ಲ ಉತ್ತರ ಕರ್ನಾಟಕದ ಆಲಮಟ್ಟಿಯಲ್ಲಿ ನಿರ್ಮಾಣವಾದ ಕೃಷ್ಣ ಮೇಲ್ದಂಡೆ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ ಅನೇಕ ಹೋರಾಟ ಧ್ವನಿ ಚಳುವಳಿ ಅಹೋರಾತ್ರ ಉಪಾಸ ಸತ್ಯಾಗ್ರಹ ಕೈಗೊಂಡರು ಕೂಡ ನಮ್ಮನ್ನು ಆಳುವ ಜನಪ್ರತಿನಿಧಿಗಳು ಹೆಸರಿಗೆ ಮಾತ್ರ ತಮ್ಮ ಸ್ವಾರ್ಥದ ಬೇಳೆ ಬೆಳಿಸಿಕೊಳ್ಳಲು ಒಬ್ಬರಿಗೊಬ್ಬರು ಕೆಸರು ಎರಚುತ್ತಾ ಕಾಲ ಹರಣ ಮಾಡುತ್ತಾ ಕಾಂಗ್ರೆಸ್–ಬಿಜೆಪಿ ಜೆಡಿಎಸ್ ಇತರೆ ಯಾವುದೇ ನಾಯಕರು ತಮ್ಮ ಮೇಲೆ ತಾವೇ ಆರೋಪ ಪ್ರತ್ಯಾರೋಪ ಮಾಡುತ್ತಾ ಸಮಯವನ್ನು ಹಾಳು ಮಾಡಿದ್ದಾರೆ ಇವರಿಗೆ ಸ್ವ ವಿಚಾ ಶಕ್ತಿ ಈ ಭಾಗದ ಎಲ್ಲಾ ಜನರಿಗೆ ರೈತ ಮುಖಂಡರಿಗೆ ಅಭಿಮಾನ ಗೌರವ ಬರಬೇಕು ಅಂದ ಮಾತ್ರಕ್ಕೆ ಮಾತ್ರ ಈ ಕಲ್ಯಾಣ ಮತ್ತು ಉತ್ತರ ಕರ್ನಾಟಕಕ್ಕೆ ಸಮಗ್ರವಾಗಿ ಅಭಿವೃದ್ಧಿ ಹೊಂದಲು ಎಲ್ಲರೂ ಕಂಕಣ ಬದ್ಧರಾಗಿ ಧ್ವನಿ ಎತ್ತಿ ನಮ್ಮ ಭಾಗವನ್ನು ಸಂಪೂರ್ಣ ಅಭಿವೃದ್ಧಿ ಹೊಂದುವಂತಾಗಬೇಕು ಎಂದು ಉತ್ತರ ಕರ್ನಾಟಕ ಭಾಗದ ಜನರು ಹಾಗೂ ಕಲ್ಯಾಣ ಕರ್ನಾಟಕದ ಭಾಗ ಜನರು ಒತ್ತಾಯ ಸರ್ಕಾರಕ್ಕೆ ಶೀಘ್ರವೇ ಶಾಶ್ವತ ವಾದಂತಹ ಅಭಿವೃದ್ಧಿ ಪಡಿಸಲಿ ಎಂಬುದು ನನ್ನ ಆಸೆಯ.

***



ಶ್ರೀ ಸಮೀನಾ ನಬಿ ನದಾಫ್
**ಹಿಂದಿ ಶಿಕ್ಷಕರು**
**ಕಿತ್ತೂರಾಣಿ ಚೆನ್ನಮ್ಮ ವಸತಿ ಶಾಲೆ**
**ಸಿಂಧನೂರು**

# ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಾಯಿಸಿ: ದಸಗೀರ ಅಲಿ

**ಕೊಪ್ಪಳ :** 2024–25 ನೇ ಸಾಲಿನ ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಾಯಿಸುವಂತೆ ಕೊಪ್ಪಳ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕ ದಸಗೀರ ಅಲಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾಯೋಜನೆಯುಶಸ್ತ್ರಚಿಕಿತ್ಸಾ ಯೋಜನೆಯಾಗಿದ್ದು, ಈ ಯೋಜನೆಯಡಿ 2024–2025 ನೇ ಸಾಲಿಗೆ ನೋಂದಾಯಿಸಲು ಸರ್ಕಾರವು ಆದೇಶ ಹೊರಡಿಸಿದೆ. ಕರ್ನಾಟಕ ಸೌಹಾರ್ದ ಸಹಕಾರಿ, ಕರ್ನಾಟಕ ಸಹಕಾರ ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ಗ್ರಾಮೀಣ ಸ್ವ–ಸಹಾಯ ಗುಂಪುಗಳ ಸದಸ್ಯರು, ಸಹಕಾರಿ ಮೀನುಗಾರರು, ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

ಗ್ರಾಮೀಣ ಸಹಕಾರ ಸಂಘಗಳ ಕುಟುಂಬ ಸದಸ್ಯರ ಗರಿಷ್ಠ ನಾಲ್ಕು ಒಂದಕ್ಕೆ ವಾರ್ಷಿಕ ವಂತಿಗೆ ರೂ.500 ಗಳು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ.100 ಗಳನ್ನು ಪಾವತಿಸಬೇಕು. ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ವಂತಿಗೆ ರೂ.1000 ಗಳು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿಹೆಚ್ಚುವರಿಸದಸ್ಯರಿಗೆರೂ.200 ಗಳನ್ನು ಪಾವತಿಸಬೇಕು.

# ವಚನಗಳ ಮೌಲ್ಯ ಅಳವಡಿಸಿಕೊಳ್ಳಿ

## ಕೊಲ್ಹಾರ ಮಕ್ಕಳ ಸಾಹಿತ್ಯ ಪರಿಷತ್ತಿನಿಂದ ವಚನ ಕಂಠಪಾಠ ಸ್ಪರ್ಧೆ

**ವರದಿ: ಲಾಲಸಾಬ ಸವಾರಗೋಳ.**

**ಕೊಲ್ಹಾರ :** ವಚನಗಳನ್ನು ವಿದ್ಯಾರ್ಥಿ ದೆಸೆಯಿಂದಲೇ ಅಧ್ಯಯನ ಮಾಡಿ ಅದರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೊಲ್ಹಾರ ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಗದೀಶ್ವರ ಸಾಲಹಳ್ಳಿ ಹೇಳಿದರು.

ತಾಲೂಕಿನ ರೋಣಿಹಾಳ ಗ್ರಾಮದ ಸಂಗನಬಸವ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಚನ ಕಂಠಪಾಠ ಸ್ಪರ್ಧೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಕಳಬೇಡ,ಕೊಲಬೇಡ ಹುಸಿಯನುಡಿಯಬೇಡ ಎಂಬ ವಚನಸಾರಾಂಶ ಅರ್ಥಮಾಡಿಕೊಂಡರೆ ಸಾಕು. ಸಮಾಜದಲ್ಲಿ ಶಾಂತಿ ನೆಲೆಸುತ್ತದೆ ಹೀಗೆ ಪ್ರತಿಯೊಂದು ವಚನಗಳು ನಿಮ್ಮಲ್ಲಿ ಬದುಕುವ ಕಲೆ, ಸಂಸ್ಕಾರ, ಆತ್ಮವಿಶ್ವಾಸ, ಸಾಧನೆಯ ಮಾರ್ಗ, ನೀತಿ, ಮಾನವೀಯ ಮೌಲ್ಯಗಳು ಮೈಗೂಡಿ, ಒಳ್ಳೆಯ ವ್ಯಕ್ತಿತ್ವ ನಮ್ಮದಾಗಲು ವಚನಗಳು ಪ್ರೇರಣೆ ನೀಡುತ್ತವೆ ಎಂದರು.




ಹಿಂದಿನ ಶಿಕ್ಷಣ ಸಂಯೋಜಕರು ಮಲಘಾಣ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಜಿ.ಎಸ್.ಗಣಿಯವರ ಮಾತನಾಡಿ ವಚನಗಳ ಕಂಠಪಾಠದೊಂದಿಗೆ ಪ್ರತಿಯೊಬ್ಬರ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಸುಂದರವಾಗಿ ರೂಪಗೊಳ್ಳುತ್ತದೆ ಎಂದರು.

ಸಂಪನ್ಮೂಲ ವ್ಯಕ್ತಿಗಳು ಹಿರೇ ಆಸಂಗಿ ಕೆಬಿಎಚ್ ಪಿಎಸ್ ಶಾಲೆಯ ಶಿಕ್ಷಕ ಶ್ರೀಕಾಂತ ಪಾರಗೊಂಡ ಮಾತನಾಡಿ ಮಕ್ಕಳು ಸದಾ ಅಧ್ಯಯನ ಶೀಲರಾಗಿರಬೇಕು.

ಜೊತೆಗೆ ಬಸವಣ್ಣನವರ ನುಡಿಯಂತೆ ದೇಹವೇ ದೇಗುಲ, ಶಿರವೆ ಕಳಸ ಎಂಬ ನುಡಿಯನ್ನು ಪಾಲಿಸಬೇಕು. ಕಾಯಕವೇ ಕೈಲಾಸ ಎಂಬ ತತ್ವ ಸೇರಿದಂತೆ ಹಲವಾರು ವಚನಗಳ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದರು.

ವಚನ ಕಂಠಪಾಠ ಸ್ಪರ್ಧೆಯಲ್ಲಿ ಹೆಚ್ಚು ವಚನ ಕಂಠಪಾಠಗೈದ ಮಕ್ಕಳಿಗೆ ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು.

ಶಿಕ್ಷಕ ಹಣಮಂತ ನ್ಯಾಮಗೌಡ, ಸಂಗನಬಸವ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀಶೈಲ ಪಾರಗೊಂಡ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಗಾಣಿಗ ಸಮಾಜದಿಂದ ಬೆಳಗಾವಿ ಚಲೋ

**ವರದಿ: ಲಾಲಸಾಬ ಸವಾರಗೋಳ.**

**ವಿಜಯಪೂರ :** ಗಾಣಿಗ ಅಭಿವೃದ್ಧಿ ನಿಗಮವನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತರುವುದರ ಜೊತೆಗೆ ಅನುದಾನ ಬಿಡುಗಡೆಗೆ ಆಗ್ರಹಿಸಿ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ವತಿಯಿಂದ ಡಿಸೆಂಬರ 18 ರಂದು ಬೆಳಗಾವಿ ಚಲೋ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ದಿಗಂಬರೇಶ್ವರ ಮಠದ ಯೋಗಿ ಕಲ್ಲಿನಾಥ ದೇವರು ಹಾಗೂ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ಯುವ ಘಟಕದ ರಾಜ್ಯಾಧ್ಯಕ್ಷ ನಂದು ಗಡಗಿ ತಿಳಿಸಿದ್ದಾರೆ.

ಗಾಣಿಗ ಸಮುದಾಯದ ಹಕ್ಕು ಪಡೆಯಲು ಈ ಹೋರಾಟ ಹಮ್ಮಿಕೊಳ್ಳಲಾಗಿದೆ. ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಸಮುದಾಯದ ಹಕ್ಕಿಗಾಗಿ ಒತ್ತಾಯಿಸಲಾಗುವುದು. ಹಿಂದುಳಿದಿರುವ ಗಾಣಿಗ ಸಮಾಜದ ಅಭಿವೃದ್ಧಿ ನಿಗಮವನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತಂದು ಶೀಘ್ರದಲ್ಲಿಯೇ ನಿಗಮಕ್ಕೆ ಅನುದಾನ ಬಿಡುಗಡೆ ಮಾಡಬೇಕೆನ್ನುವುದು ನಮ್ಮ ಒತ್ತಾಸೆಯಾಗಿದೆ. ರಾಜಕೀಯ ಹಿತಾಸಕ್ತಿಯಿಟ್ಟುಕೊಂಡಿರುವ ಕೆಲ ಸಮುದಾಯದ ಮುಖಂಡರ ಮಾತುಗಳಿಗೆ ಕಿವಿಗೊಡದೆ ಸರ್ವರೂ ಬೆಳಗಾವಿ ಚಲೋ ಹೋರಾಟದಲ್ಲಿ ಭಾಗವಹಿಸಿಬೇಕೆಂದು ಕರೆ ನೀಡಿದ್ದಾರೆ.

ಬೆಳಗಾವಿ ಚಲೋ ಹೋರಾಟದಲ್ಲಿ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಆನಂದ ಕೆ. ಮಂಡ್ಯ ಸಹಿತ ಅನೇಕ ನಾಯಕರು ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

# ರಾಮಪ್ಪ ಉಳ್ಳಾಗಡ್ಡಿ ನಿಧನ



**ರಬಕವಿ–ಬನಹಟ್ಟಿ :** ಬನಹಟ್ಟಿ ಕೆರೆ ರಸ್ತೆಯ ನಿವಾಸಿ ರಾಮಪ್ಪ ಉಳ್ಳಾಗಡ್ಡಿ(56) ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಳಗವಿದೆ.

# ಡಾ. ಕನಕ ತಾರಾ ನಿಧನ



**ಬೀಳಗಿ :** ಕನ್ನಡ ಜಾನಪದ ಪರಿಷತ್ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಕನಕ ತಾರಾ ನಿಧನಕ್ಕೆ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಭಾವಪೂರ್ಣ ಶೃದ್ಧಾಂಜಲಿ ಸಲ್ಲಿಸಲಾಯಿತು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ, ಪ್ರಧಾನ ಕಾರ್ಯದರ್ಶಿ ಆರ್. ಬಿ. ನಬಿವಾಲೆ, ಕಸಾಪ ರಾಜ್ಯ ಕಾರ್ಯಕಾರಿಣಿ ಸದಸ್ಯ ಜಿ. ಕೆ. ತಳವಾರ, ಖಜಾಂಚಿ ಸುರೇಶ ವಸ್ತ್ರದ, ಪ್ರಕಾಶ ಬಾಳಕ್ಕನವರ, ಎಸ್. ಬಿ. ಕೋರಿ, ನಿಂಗರಾಜ ಮಂಬ್ರುಕರ, ವಿ. ಜಿ. ಪಾಟೀಲ, ರಾಜು ಬರಗಿ, ಎಸ್. ಬಿ. ಕಟಗಿ, ಬಸವರಾಜ ದಾವಣಗೆರೆ, ಚನ್ನಬಸು ಲೆಕ್ಕಿಹಾಳ, ಬಿ. ಎನ್. ಅಸ್ಕಿ, ಡಿ. ಎಫ್. ಜುಟ್ಲರ್, ಮಾರುತಿ ಪಾಟೋಳಿ, ಪವಿತ್ರಾ ಜಕ್ಕಪ್ಪನವರ, ಎಸ್. ಬಿ. ಯಾವಗಲ್ಮಠ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

# ಚಂದ್ರಕಾಂತ ದತ್ತು ಜಾಧವ ನಿಧನ



**ಮುಧೋಳ :** ಇಲ್ಲಿನ ಎಸ್.ಬಿ.ಐ. ಕಾಲೊನಿಯ ನಿವಾಸಿ ಚಂದ್ರಕಾಂತ ದತ್ತು ಜಾಧವ ತಮ್ಮ 57 ನೆಯ ವಯಸ್ಸಿನಲ್ಲಿ ಡಿಸೆಂಬರ್ 9 ರಂದು ನಿಧನರಾಗಿದ್ದಾರೆ. ಮೃತರು ತಮ್ಮ ಹಿಂದೆ ಪತ್ನಿ, ಅಳಿಯಂದಿರರಾದ ಕಾಂಗ್ರೆಸ್ ಮುಖಂಡ ರಮೇಶ ಈಶ್ವರ್ ಶಿಂಧೆ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಚಂದ್ರಕಾಂತ ಅವರ ನಿಧನಕ್ಕೆ ಸಚಿವ ಆರ್. ಬಿ. ತಿಮ್ಮಾಪುರ, ಮುಖಂಡರಾದ ಉದಯಸಿಂಹ ಘಡತರೆ, ಶೆಟವಾಜಿ, ಚಂದನಶಿವ, ದಿಲೀಪ್ ಪಾಲೋಜಿ, ಭೀಮಶಿ ತೋಟದಾರ ಸೇರಿದಂತೆ ಹಲವಾರು ಗಣ್ಯರು ಶೋಕ ವ್ಯಕ್ತಪಡಿಸಿದ್ದಾರೆ.

# ಕೊಪ್ಪಳ ರೈಲ್ವೆ ನಿಲ್ದಾಣಕ್ಕೆ ಗವಿಶ್ರೀ ನಾಮಕರಣ ಮಾಡಲು ರಾಯ್ಕರ್ ಒತ್ತಾಯ



**ಕೊಪ್ಪಳ :** ಇಲ್ಲಿನ ಧಾರ್ಮಿಕ ಇತಿಹಾಸಿಕ ಪ್ರಸಿದ್ಧ ಶ್ರೀ ಗವಿಸಿದ್ದೇಶ್ವರ ಮಠದ ಪರಮಪೂಜ್ಯ ಗವಿಶ್ರೀ ಅವರ ಹೆಸರು ಕೊಪ್ಪಳ ರೈಲ್ವೆ ನಿಲ್ದಾಣ–ಕ್ಕೆ ನಾಮಕರಣ ಮಾಡಬೇಕೆಂದು ಕೊಪ್ಪಳ ನಗರಸಭೆಯ ಮಾಜಿ ಸದಸ್ಯ ಪ್ರಶಾಂತರಾಯ್ಕರ್ ಒತ್ತಾಯಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿದ ಅವರು ಈಗಾಗಲೇ ಹಲವು ಜನ ಹಲವು ಹೆಸರುಗಳನ್ನು ರೈಲ್ವೆ ನಿಲ್ದಾಣಕ್ಕೆ ನಾಮಕರಣ ಮಾಡಲು ಒತ್ತಾಯಿಸುತ್ತಿದ್ದಾರೆ ಆದರೆ ಇಲ್ಲಿನ ರೈಲ್ವೆ ನಿಲ್ದಾಣಕ್ಕೆ ಗವಿಶ್ರೀ ಎಂಬ ಹೆಸರು ಸೂಕ್ತವಾಗಿದೆ, ರೈಲ್ವೆ ಇಲಾಖೆಯ ಮುಖ್ಯ ನೈರುತ್ಯ ಕಚೇರಿ ಹುಬ್ಬಳ್ಳಿಯಲ್ಲಿದ್ದು ಹುಬ್ಬಳ್ಳಿಯ ರೈಲ್ವೆ ಸ್ಥಾನಕ್ಕೂ ಕೂಡ ಸಿದ್ಧಾರೂಢ ಮಠದ ಹೆಸರಿಡಲಾಗಿದೆ, ಅದರಂತೆ ಕೊಪ್ಪಳಕ್ಕೂ ಕೂಡ ಈ ಭಾಗದ ನಡೆದಾಡುವ ದೇವರು ಎಂದೇ ಖ್ಯಾತಿ ಪಡೆದಿರುವ ಮತ್ತು ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ದಾಸೋಹ ಜೊತೆಗೆ ಅಕ್ಷರ ಕ್ರಾಂತಿ ನೀಡುವಲ್ಲಿ ಸಂಜೀವಿನಿಯಾಗಿ ಶ್ರಮಿಸುತ್ತಿರುವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳವರ ಗವಿಶ್ರೀ ಎಂಬ ಹೆಸರು ಕೊಪ್ಪಳದ ರೈಲ್ವೆ ನಿಲ್ದಾಣ–ಕ್ಕೆ ನಾಮಕರಣ ಮಾಡುವುದು ಸೂಕ್ತವಾಗಿದೆ ಎಂದು ಪ್ರಶಾಂತ್ ರಾಯ್ಕರ್ ವಿವರಿಸಿದ್ದಾರೆ

ಕಳೆದ ಎರಡು ವರ್ಷಗಳ ಹಿಂದೆ ಇದೇ ರೀತಿ ಗವಿಶ್ರೀ ಹೆಸರನ್ನು ಇಲ್ಲಿನ ರೈಲ್ವೆ ನಿಲ್ದಾಣಕ್ಕೆ ನಾಮಕರಣ ಮಾಡಬೇಕೆಂದು ಒತ್ತಾಯಿಸಿದ್ದರು, ಕೂಡಲೇ ಸಂಬಂಧಪಟ್ಟ ಇಲಾಖೆ ಮತ್ತು ಜನಪ್ರತಿನಿಧಿಗಳು ಅಗತ್ಯ ಕ್ರಮ ಕೈಗೊಂಡು ಕೊಪ್ಪಳ ರೈಲ್ವೆ ನಿಲ್ದಾಣಕ್ಕೆ ಗವಿ ಶ್ರೀ ಹೆಸರು ನಾಮಕರಣ ಮಾಡಲು ಅವರು ಒತ್ತಾಯಿಸಿದ್ದಾರೆ.

# ರೈಲು ನಿಲ್ದಾಣಕ್ಕೆ ಕುಮಾರ ರಾಮನ ಹೆಸರಿಡಿ: ಬೆಟ್ಟದೂರು




**ಕೊಪ್ಪಳ :** ಕೊಪ್ಪಳದ ರೈಲು ನಿಲ್ದಾಣ–ಕ್ಕೆ ಐತಿಹಾಸಿಕ ವೀರಪುರರುಷ, ಪರನಾರಿ ಸಹೋದರ, ಗಂಡುಗಲಿ ಕುಮಾರರಾಮನ ಹೆಸರಿಡಲು ಪ್ರಗತಿಪರರ ಸಂಘಟನೆಗಳ ಒಕ್ಕೂಟ ಮುಖಂಡರು ಹಾಗೂ ರಾಜ್ಯೋತ್ಸ ವ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ. ಅಲ್ಲಮಪ್ರಭು ಬೆಟ್ಟದೂರ ಅವರು, ಮುಖ್ಯಮಂತ್ರಿ,ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ, ಸಂಸದ ರಾಜಶೇಖರ ಹಿಟ್ನಾಳ ಅವರನ್ನು ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಕನ್ನಡವನ್ನು ಕಟ್ಟಿದ ಹೆಗ್ಗಳಿಕೆ ಇರುವ ಮತ್ತು ವಿಜಯನಗರ ಸಾಮ್ರಾಜ್ಯವನ್ನು ಕಟ್ಟುವ ಕುರಿತು ಕನಸು ಕಂಡು ಮತ್ತು ಅದ–ಕ್ಕೆ ಬಲತಂದಿದ್ದ ಕುಮ್ಮಟದುರ್ಗದ ದೊರೆ ಕುಮಾರರಾಮ ಮಾತ್ರ, ಆದಕ್ಕೂ ಮಿಗಿಲಾಗಿ ಆತ ಪರನಾರಿ ಸಹೋದರ ಬಿರುದಾಂಕಿತನಾಗಿದ್ದು, ಇಡೀ ಮಹಿಳಾ ಕುಲಕ್ಕೆ ಆತ ಆದರ್ಶ, ರಾಜ ಮತ್ತು ರಾಜರ ಆಳ್ವಿಕೆಗೂ ಸಹಿತ ಆತ ಆದರ್ಶನಾಗಿದ್ದಾನೆ, ಆತನ ಹೆಸರನ್ನು ಇಡುವದು ಅತ್ಯಂತ ಸೂಕ್ತ ಮತ್ತು ನಿಜವಾದ ನ್ಯಾಯವನ್ನು ಕೊಟ್ಟಂತಾಗುತ್ತದೆ,ಕೊಪ್ಪಳದಲ್ಲಿ ಅಶೋಕನ ಶಿಲಾ ಶಾಸನಗಳಿದ್ದು ಯುದ್ಧವನ್ನು ತಿರಸ್ಕರಿಸಿ ಬುದ್ಧನಿಗೆ ಶರಣಾಗಿ ಶಾಂತಿ ಪ್ರಿಯನಾದ ಸಾಮ್ರಾಟ್ ಅಶೋಕ ಎರಡು ಹೆಸರುಗಳಲ್ಲಿ ಒಂದನ್ನು ಕೊಪ್ಪಳ ರೈಲ್ವೆ ನಿಲ್ದಾಣಕ್ಕೆ ಇಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಮುಖಂಡರಾದ ಬಸವರಾಜ ಶೀಲವಂತರ, ಮಹಾಂತೇಶ ಕೊತಬಾಳ , ಅಂದಪ್ಪ ಬೆಣಕಲ್ , ಶುಕರಾಜ್ ತಾಳಕೇರಿ, ರಾಮಣ್ಣ ಕಲ್ಲನವರ್ , ಟಿ.ರತ್ನಾಕರ,ಶಿವಪ್ಪ ಹಡಪದ,ಗಾಳೆಪ್ಪ ಮುಂಗೋಲಿ ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State